EMAIL : dairyadadaari@gmail.com ಸಂಪುಟ: 01 ಸಂಚಿಕೆ: 69
ಬೆಲೆ ರೂ : 2.00
ರಾಯಚೂರು
ಪುಟ: 4

ನಿಮ್ಮ ನಂಬಿಕೆಯ ಧ್ವನಿ

# ಧೈರ್ಯದ ದಾರಿ

DAIRYADA DAARI NEWS PAPER

ಸಂಪಾದಕರು : ಸೈಯದ್ ಅಹ್ಮದ್ ಹುಸೇನಿ ಮತವಾಲೆ
Cell : 6360866626, 9036887793
KANNADA DAILY NEWS PAPER
ಕನ್ನಡ ದಿನಪತ್ರಿಕೆ
DAIRYADA DAARI
RNI NO: KNKAN/25/A2795 ಗುರುವಾರ: 19-02-2026

## ವಿಧಾನಸೌಧದಲ್ಲಿ ನಡೆದ ಸಭೆಯಲ್ಲಿ ಶಾಸಕ ಬಸನಗೌಡ ದದ್ದಲ್ ಭಾಗಿ



ಧೈರ್ಯದ ದಾರಿ

**ರಾಯಚೂರು ಫೆ,18–** ರಾಯಚೂರು ಗ್ರಾಮೀಣ ಕ್ಷೇತ್ರದ ಶಾಸಕರು ಹಾಗೂ ಕರ್ನಾಟಕ ಮಹರ್ಷಿ ವಾಲ್ಮೀಕಿ ಅಭಿವೃದ್ಧಿ ನಿಗಮದ ಅಧ್ಯಕ್ಷರಾದ ಬಸನಗೌಡ ದದ್ದಲ್ ಅವರು ಫೆ.18ರಂದು ಬೆಂಗಳೂರಿನ ವಿಧಾನಸೌಧದಲ್ಲಿ ನಡೆದ ಸಭೆಯಲ್ಲಿ ಭಾಗಿಯಾದರು.
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಿಂದ ಹೊರಡಿಸಲಾದ 04 ಅಧಿಸೂಚನೆಗಳಿಗೆ ಸಂಬಂಧಿಸಿದ ಇಲಾಖೆಗಳ ಮುಖ್ಯಸ್ಥರೊಂದಿಗಿನ ಸಭೆಯಲ್ಲಿ ಹಲವಾರು ವಿಷಯಗಳ ಕುರಿತು ಅವರು ಚರ್ಚಿಸಿದರು. ಈ ಸಂದರ್ಭದಲ್ಲಿ ಶಾಸಕರು, ವಿಧಾನ ಪರಿಷತ್ ಸದಸ್ಯರು ಮತ್ತು ಅಧಿಕಾರಿಗಳು ಉಪಸ್ಥಿತರಿದ್ದರು.

SEHRI & IFTARI TIME
DAY : THURSDAY
RAMZAN : 01
DATE: **19.02.2026**
END TIME OF SEHRI :5:28 AM
FAJAR AZAAN : 5:33 AM
IFTAR TIME : 6:27 PM

**ಸೈಯದ್ ಅಹ್ಮದ್ ಹುಸೇನಿ ಮತ್ ವಾಲೆ**
**ಕಾರ್ಯದರ್ಶಿಗಳು : ಮತ್ ವಾಲೆ ಸಾಹೇಬ್ ಪಬ್ಲಿಕ್ ಸ್ಕೂಲ್ ಮಾನ್ವಿ**
**ಸಂಪಾದಕರು : ಧೈರ್ಯದ ದಾರಿ ಕನ್ನಡ ದಿನಪತ್ರಿಕೆ**



# ಮಾಧ್ಯಮವನ್ನು ಹತ್ತಿಕ್ಕಲು ಯತ್ನಿಸುತ್ತಿದೆಯೇ ಕುರ್ಚಿ ಕಚ್ಚಾಟದಲ್ಲಿರುವ ಗ್ಯಾರಂಟಿ ಸರ್ಕಾರ..?

**ಬೆಂಗಳೂರು,ಫೆ.18–** ಸಂವಿಧಾನದ ನಾಲ್ಕನೇ ಅಂಗ ಎನಿಸಿದ ಮಾಧ್ಯಮವನ್ನು ಹತ್ತಿಕ್ಕುವ ಪ್ರಯತ್ನ ಸರ್ಕಾರದಿಂದ ನಡೆದಿದೆಯೇ ಎಂಬ ಗುಮಾನಿ ಎದ್ದಿದೆ.ಏಕೆಂದರೆ ಆಡಳಿತ ಮತ್ತು ಸಿಬ್ಬಂದಿ ಸುಧಾರಣಾ ಇಲಾಖೆ ಹೊರಡಿಸಿರುವ ವಿವಾದಾತಕ ಅಧಿಸೂಚನೆ ಇಂತಹ ಅನುಮಾನಗಳಿಗೆ ಎಡೆಮಾಡಿಕೊಟ್ಟಿದೆ.

ಆಡಳಿತ ಮತ್ತು ಸಿಬ್ಬಂದಿ ಸುಧಾರಣೆ ಇಲಾಖೆಯ ಅಧೀನ ಕಾರ್ಯದರ್ಶಿ ಆರ್.ಯದು ಕುಮಾರ್ ಅವರು ಹೊರಡಿಸಿರುವ ಪ್ರಕಟಣೆಯಲ್ಲಿ ಇನ್ನು ಮುಂದೆ ಮಾಧ್ಯಮದವರು ಆಡಳಿತ ಶಕ್ತಿ



ಕೇಂದ್ರ ವಿಧಾನಸೌಧದ ಕಟ್ಟಡದಲ್ಲಿ ನಿಗದಿಪಡಿಸಿರುವ ಸ್ಥಳದಲ್ಲಿ ಮಾತ್ರ ಸಂಬಂಧಪಟ್ಟವರಿಂದ ಸಂದರ್ಶನ ಪಡೆಯಬೇಕೆಂಬ ಸೂಚನೆ ಹೊರಡಿಸಿರುವುದು ವಿವಾದಕ್ಕೆ ದಾರಿ ಮಾಡಿಕೊಟ್ಟಿದೆ.

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯ ಕಾರ್ಯದರ್ಶಿಯವರು ವಾರ್ತಾ ಇಲಾಖೆಯ ನಿರ್ದೇಶಕರಿಗೆ ಪತ್ರ ರವಾನಿಸಿದೆ. ಈ ಪತ್ರವನ್ನು ವಿಧಾನಸೌಧದ ಉಪ ಪೊಲೀಸ್ ಆಯುಕ್ತರು(ಎಸಿಪಿ) ಕಳುಹಿಸಿಕೊಡಲಾಗಿದ್ದು, ಇನ್ನು ಮುಂದೆ ವಿಧಾನಸೌಧದಲ್ಲಿ ನಿಗದಿಪಡಿಸಿದ 2ನೇಪುಟಕ್ಕೆ►

# ಡಾ.ಬಿ.ಆರ್ ಅಂಬೇಡ್ಕರ್ ನಾಮಫಲಕ ಮರುಸ್ಥಾಪನೆ ವಿಳಂಬಕ್ಕೆ ಖಂಡನೆ ಅಧಿಕಾರಿಗಳ ವಿರುದ್ಧ ಫೆ. 23 ರಂದು ರಸ್ತೆ ತಡೆ, ಧರಣಿ ಎಚ್ಚರಿಕೆ

ಧೈರ್ಯದ ದಾರಿ

**ಮಾನ್ವಿ,ಫೆ.18–** ತಾಲೂಕಿನ ಹಿರೇಕೊಟ್ನೆಕಲ್ ಗ್ರಾಮದಲ್ಲಿ ರಸ್ತೆ ಅಗಲೀಕರಣದ ವೇಳೆ ತೆರವುಗೊಳಿಸಲಾದ ಡಾ. ಬಿ.ಆರ್. ಅಂಬೇಡ್ಕರ್ ಅವರ ನಾಮಫಲಕವನ್ನು ಮರುಸ್ಥಾಪನೆ ಮಾಡದೆ ಅಧಿಕಾರಿಗಳು ಅವಮಾನ ಮಾಡುತ್ತಿದ್ದಾರೆ ಎಂದು ಕರ್ನಾಟಕ ಪ್ರದೇಶ ಮಾದಿಗರ ಸಂಘದ ರಾಜ್ಯಾಧ್ಯಕ್ಷ ಪ್ರಭುರಾಜ್ ಕೊಡ್ಲಿ ಹೇಳಿದರು.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ದಲಿತಪರ ಸಂಘಟನೆಗಳ ಒಕ್ಕೂಟ ಮಾನ್ವಿ ವತಿಯಿಂದ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು ಸುಮಾರು 10–12 ವರ್ಷಗಳ ಹಿಂದೆ ಗ್ರಾಮದಲ್ಲಿ ಸ್ಥಾಪಿಸಲಾದ ನಾಮಫಲಕವನ್ನು ರಸ್ತೆ ಅಗಲೀಕರಣದ ಸಂದರ್ಭದಲ್ಲಿ 1 ವಾರದಲ್ಲಿ ಮರುಸ್ಥಾಪನೆ ಮಾಡುತ್ತೇವೆ ಎಂದು ಭರವಸೆ ನೀಡಿ ತೆರವುಗೊಳಿಸಲಾಯಿತು. ಆದರೆ ಹಲವು ತಿಂಗಳು ಕಳೆದರೂ ನಾಮಫಲಕ ಮರುಸ್ಥಾಪನೆ ಮಾಡದೆ ಅಧಿಕಾರಿಗಳು ನಿರ್ಲಕ್ಷ್ಯ ತೋರಿಸುತ್ತಿರುವುದು ಅಂಬೇಡ್ಕರ್ ಅನುಯಾಯಿಗಳಿಗೆ ಹಾಗೂ ದಲಿತ ಸಮುದಾಯಕ್ಕೆ ಅಪಮಾನಕರವಾಗಿದೆ ಎಂದು ಅವರು ಆಕ್ರೋಶ ವ್ಯಕ್ತಪಡಿಸಿದರು.

ಈ ಕುರಿತು ಕಳೆದ 3–4 ತಿಂಗಳಿಂದ ತಹಸೀಲ್ದಾರ್ ಕಚೇರಿಗೆ ಸುಮಾರು 30–40 ಬಾರಿ ಭೇಟಿ ನೀಡಿ ಮನವಿ ಸಲ್ಲಿಸಿದರೂ ತಹಸೀಲ್ದಾರ್ ಹಾಗೂ ರಸ್ತೆ ಅಗಲೀಕರಣದ ಅಧಿಕಾರಿಗಳಾದ ವಿಕಾಸ್ ಮತ್ತು ಸುಬ್ರಮಣ್ಯ ಅವರು ಸ್ಪಷ್ಟ ಕ್ರಮ ಕೈಗೊಳ್ಳದೆ



ದಿನಾಲೂ ಸುಳ್ಳು ಹೇಳಿ ಕಾಲಹರಣ ಮಾಡುತ್ತಿದ್ದಾರೆ ಎಂದು ಆರೋಪಿಸಿದರು. ಹೀಗಾಗಿ ಫೆಬ್ರವರಿ 23, 2026 ರಂದು ಹಿರೇಕೊಟ್ನೆಕಲ್ ಗ್ರಾಮದ ಮುಖ್ಯ ರಸ್ತೆಯಲ್ಲಿ ಡಾ. ಬಿ.ಆರ್. ಅಂಬೇಡ್ಕರ್ ನಾಮಫಲಕ ಮರುಸ್ಥಾಪನೆ ಆಗುವವರೆಗೆ ಬೃಹತ್ ಧರಣಿ ಸತ್ಯಾಗ್ರಹ ಹಾಗೂ ರಸ್ತೆ ತಡೆ ಹೋರಾಟ ನಡೆಸಲಾಗುವುದು ಎಂದು ಎಚ್ಚರಿಸಿದರು.

ಈ ಸಂದರ್ಭದಲ್ಲಿ ಮುಖಂಡರಾದ ತಿಪ್ಪಣ್ಣ ಬಾಗಲವಾಡ ಕೂಡ ಮಾತನಾಡಿ, ಅಂಬೇಡ್ಕರ್ ಅವರ ನಾಮಫಲಕ ಮರುಸ್ಥಾಪನೆ ವಿಚಾರದಲ್ಲಿ ಅಧಿಕಾರಿಗಳು ತಕ್ಷಣ ಕ್ರಮ ಕೈಗೊಳ್ಳಬೇಕು. ಇಲ್ಲವಾದಲ್ಲಿ ದಲಿತ ಸಮುದಾಯದ ಗೌರವ ಕಾಪಾಡುವ ನಿಟ್ಟಿನಲ್ಲಿ ತೀವ್ರ ಹೋರಾಟ ಅನಿವಾರ್ಯವಾಗುತ್ತದೆ ಎಂದು ಹೇಳಿದರು. ಅಂದು ನಡೆಯುವ ಹೋರಾಟದಲ್ಲಿ ತಾಲ್ಲೂಕಿನ ಎಲ್ಲಾ ಸಮುದಾಯದ ಹೋರಾಟಗಾರರು, ದಲಿತ ಪರ ಸಂಘಟನೆಗಳ ಮುಖಂಡರು, ಅಂಬೇಡ್ಕರ್ ಅನುಯಾಯಿಗಳು, ವಕೀಲರು, ಯುವಕರು ಹಾಗೂ ಬುದ್ದಿಜೀವಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಹೋರಾಟವನ್ನು ಯಶಸ್ವಿಗೊಳಿಸಬೇಕೆಂದು ಮನವಿ ಮಾಡಿದರು.

ಈ ಸಂದರ್ಭದಲ್ಲಿ ಮುಖಂಡರಾದ ಶಿವರಾಜ್ ಚಾನೇಕಲ್, ಬುಡ್ಡಪ್ಪ ನಾಯಕ ಮಲ್ಲಿನಮಡ್ಗು, ಚಲುವಾದಿ ಮಹಾಸಭಾ ತಾಲೂಕು ಅಧ್ಯಕ್ಷ ಶಿವರಾಜ್ ಉಮಳಿಹೊಸೂರು, ನರಸಪ್ಪ ಜೂಕುರ್, ನರಸಿಂಹ ರಾಜೊಳ್ಳಿ, ದತ್ತಾತ್ರೇಯ ಹಿರೇಕೊಟ್ನೆಕಲ್, ಕಾಮೇಶ್, ಹಂಪಯ್ಯ ನಾಯಕ ಸೇರಿದಂತೆ ಇನ್ನಿತರರು ಇದ್ದರು.

## SEHRI & IFTARI TIME TABLE FOR MANVI TALUK

| IFTAR TIME افطار کا وقت | FAJAR AZAN START TIME فجر کی اذان کا شروع وقت | END TIME OF SEHRI ختم سحری | DATE تاریخ | RAMAZAN رمضان | DAY ایام |
|---|---|---|---|---|---|
| 6:31 | 5:26 | 5:21 | 6 | ۱۶ | جمعہ |
| 6:32 | 5:24 | 5:19 | 7 | ۱۷ | ھفتہ |
| 6:32 | 5:24 | 5:19 | 8 | ۱۸ | اتوار |
| 6:32 | 5:23 | 5:18 | 9 | ۱۹ | پیر |
| 6:32 | 5:23 | 5:18 | 10 | ۲۰ | منگل |
| 6:32 | 5:22 | 5:17 | 11 | ۲۱ | بدھ |
| 6:32 | 5:22 | 5:17 | 12 | ۲۲ | جمعرات |
| 6:33 | 5:20 | 5:15 | 13 | ۲۳ | جمعہ |
| 6:33 | 5:20 | 5:15 | 14 | ۲۴ | ھفتہ |
| 6:33 | 5:19 | 5:14 | 15 | ۲۵ | اتوار |
| 6:33 | 5:19 | 5:14 | 16 | ۲۶ | پیر |
| 6:34 | 5:17 | 5:12 | 17 | ۲۷ | منگل |
| 6:34 | 5:17 | 5:12 | 18 | ۲۸ | بدھ |
| 6:34 | 5:16 | 5:11 | 19 | ۲۹ | جمعرات |
| 6:34 | 5:16 | 5:11 | 20 | ۳۰ | جمعہ |

| IFTAR TIME افطار کا وقت | FAJAR AZAN START TIME فجر کی اذان کا شروع وقت | END TIME OF SEHRI ختم سحری | DATE تاریخ | RAMAZAN رمضان | DAY ایام |
|---|---|---|---|---|---|
| 6:27 | 5:33 | 5:28 | 19th February | ۱ | جمعرات |
| 6:27 | 5:33 | 5:28 | 20 | ۲ | جمعہ |
| 6:28 | 5:32 | 5:27 | 21 | ۳ | ھفتہ |
| 6:28 | 5:32 | 5:27 | 22 | ۴ | اتوار |
| 6:29 | 5:31 | 5:26 | 23 | ۵ | پیر |
| 6:29 | 5:31 | 5:26 | 24 | ۶ | منگل |
| 6:29 | 5:30 | 5:25 | 25 | ۷ | بدھ |
| 6:29 | 5:30 | 5:25 | 26 | ۸ | جمعرات |
| 6:30 | 5:29 | 5:24 | 27 | ۹ | جمعہ |
| 6:30 | 5:29 | 5:24 | 28 | ۱۰ | ھفتہ |
| 6:30 | 5:28 | 5:23 | 1st March | ۱۱ | اتوار |
| 6:30 | 5:28 | 5:23 | 2 | ۱۲ | پیر |
| 6:31 | 5:27 | 5:22 | 3 | ۱۳ | منگل |
| 6:31 | 5:27 | 5:22 | 4 | ۱۴ | بدھ |
| 6:31 | 5:26 | 5:21 | 5 | ۱۵ | جمعرات |

# ತಾಯಮ್ಮ ದೇವಸ್ಥಾನಕ್ಕೆ ಸಚಿವ ಬೋಸರಾಜು ಭೇಟಿ: ಹೆಚ್ಚಿನ ಅನುದಾನ ನೀಡುವ ಭರವಸೆ

ಧೈರ್ಯದ ದಾರಿ

**ಸಿರವಾರ, ಫೆ.18–** ಸಿರವಾರ ಪಟ್ಟಣದ 4ನೇ ವಾರದಡಿನಲ್ಲಿರುವ ಶ್ರೀ ಏಳು ಮಕ್ಕಳ ತಾಯಮ್ಮ ದೇವಿ ದೇವಸ್ಥಾನಕ್ಕೆ ಮಂಗಳವಾರ ಭೇಟಿ ನೀಡಿದ ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಖಾತೆ ಸಚಿವರಾದ ಎನ್.ಎಸ್.ಭೋಸರಾಜು ಅವರು ತಾಯಮ್ಮ ದೇವಿಯ ದರ್ಶನ ಪಡೆದರು.



ಈ ವೇಳೆ ಮಾತನಾಡಿದ ಅವರು ವರ್ಷದಿಂದ ವರ್ಷಕ್ಕೆ ತಾಯಮ್ಮ ದೇವಿಯ ಉತ್ಸವ ಅದ್ದೂರಿಯಾಗಿ ನಡೆಯುತ್ತಿದೆ ಕ್ಷೇತ್ರದ ಶಾಸಕರಾದ ಹಂಪಯ್ಯ ಬಾಯಕರ ಅವರ ಒತ್ತಾಸೆಯ ಮೇರೆಗೆ ಕಳೆದ ವರ್ಷ ಮಾತು ಕೊಟ್ಟಂತೆ ತಾಯಮ್ಮ ದೇವಸ್ಥಾನಕ್ಕೆ 50 ಲಕ್ಷ ರೂ. ಅನುದಾನ ನೀಡಲಾಗಿದೆ ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಸೇರುತ್ತಿದ್ದಾರೆ ಭಕ್ತರಿಗೆ ಅನುಕೂಲವಾಗಲೆಂದು

ತಾಯಮ್ಮ ದೇವಿಯ ಭವನ ನಿರ್ಮಾಣಕ್ಕೆ ಅನುದಾನ ನೀಡಲಾಗಿದೆ ಕಾಮಗಾರಿ ಪ್ರಗತಿಯಲ್ಲಿದ್ದು ಬರುವ ವರ್ಷದಲ್ಲಿ ಉದ್ಘಾಟನೆಯಾಗಲಿದೆ ಎಂದರು.

ಈ ಸಂದರ್ಭದಲ್ಲಿ ಕಾಂಗ್ರೆಸ್ ಹಿರಿಯ ಮುಖಂಡ ಚುಕ್ಕಿ ಸೂಗಪ್ಪ ಸಾಹುಕಾರ್, ವೈ.ಶರಣಯ್ಯ ನಾಯಕ ಗುಡದಿನ್ನಿ, ಚುಕ್ಕಿ ಶಿವಕುಮಾರ್, ಅರಕೇರಿ ಶಿವಶರಣ ಸಾಹುಕಾರ್, ರಮೇಶ ದರ್ಶನಕರ್, ಎಂ.ಶ್ರೀನಿವಾಸ, ನಿರ್ಮಲಾ ಬೆಣ್ಣೆ, ಎನ್.ರೇಣುಕಾ, ದಾನನಗೌಡ, ಟಿ.ಆರ್.ಪಾಟೀಲ್, ವೈ.ಭೂಪನಗೌಡ, ಭೀಮನಗೌಡ ಪಾಟೀಲ್ ನಾಗಡದಿನ್ನಿ, ಪ.ಪಂ.ಅಧ್ಯಕ್ಷ ಹಾಜಿ ಚೌದ್ರಿ, ಹಸೇನ ಅಲೀ, ಹೆಚ್.ಕೆ.ಶಿವಗೇನಿ, ಜೆ.ಅಬ್ರಹಾಂ ಹೊನ್ನಟಿಗಿ, ನಾಗರಾಜ್ ಚಿನ್ನನ್ ಸೂರಿ ದುರ್ಗಣ್ಣ ನಾಯಕ್ ಹೆಚ್.ಕೆ ಅಮರೇಶ, ಸುಬ್ಬಾರೆಡ್ಡಿ, ಕಿಷ್ಟಪ್ಪ ರೆಡ್ಡಿ,

# ದುಶ್ಚಟಗಳಿಗೆ ಬಲಿಯಾಗಬೇಡಿ ಮಹೇಶ್ ಬೆಟ್ಟದೂರ್

ಧೈರ್ಯದ ದಾರಿ

**ಮಾನ್ವಿ,ಫೆ.18–** ಗ್ರಾಮೀಣ ಪ್ರದೇಶ ಯುವಕರು ದುಶ್ಚಟಗಳಿಗೆ ಬಲಿಯಾಗದೆ ದೇಶ ಸೇವೆಯಲ್ಲಿ ತೊಡಗಿಸಿಕೊಳ್ಳಬೇಕು ಹಾಗೆ ತಂದೆ ತಾಯಿಗಳ ಸೇವೆಯೊಂದಿಗೆ ಗುರುಗಳ ಮಾರ್ಗದರ್ಶನದಲ್ಲಿ ನಡೆಯಬೇಕು ನಿನ್ನೆ ಕೊರವಿ ಗ್ರಾಮದಲ್ಲಿ ಹೊಸದಾಗಿ ಕೇಂದ್ರೀಯ ಶಸ್ತ್ರಪಡೆಗೆ ನೇಮಕವಾಗಿರುವ ಯುವಕರಿಗೆ ಹಾಗೂ ಅವರ ತಂದೆ ತಾಯಿಗಳಿಗೆ ಸನ್ಮಾನ ಕಾರ್ಯಕ್ರಮ ಸಮಾರಂಭದಲ್ಲಿ ಮಾನ್ವಿ ಯುವ ಬಳಗದ ಸಂಚಾಲಕ ಮಹೇಶ್ ನಾಯಕ್ ಬೆಟ್ಟದೂರ್ ತಮ್ಮ ಅನಿಸಿಕೆ ವ್ಯಕ್ತಪಡಿಸಿದರು ಮುಸ್ತಫ ಗುರು ಮಾತನಾಡಿ ದೇಶದ ಸೈನಿಕರಿಗೆ ಯಾವುದೇ ತೊಂದರೆಯಾದರೆ ಇವರ ಜೊತೆ ನಮ್ಮ ಯುವ ಸಮೂಹ ಸೈನಿಕರಿಗೆ ಇವರ ಕುಟುಂಬದವರಿಗೆ ಬೆನ್ನ ಹಿಂದೆ ನಾವಿರುತ್ತೇವೆ
ಸನ್ಮಾನ ಸ್ವೀಕರಿಸಿ ಮಾತನಾಡಿದ ವೆಂಕಟೇಶ್ ನಾಯಕ ಕೊರವಿ



ನಾನು ತಾಯಿಯ ಆಸೆಯಂತೆ ಕಷ್ಟಪಟ್ಟು ಅಭ್ಯಾಸ ಮಾಡಿ ತರಬೇತಿಗೆ ಶಿಬಿರಕ್ಕೆ ಹೋಗದೆ ತಾಯಿಯ ಜೊತೆ ಜಮೀನಿನಲ್ಲಿ ಕೆಲಸ ಮಾಡಿ ಪರೀಕ್ಷೆಯಲ್ಲಿ ಉತ್ತೀರ್ಣನಾಗಿ ದೈಹಿಕ ವೈದ್ಯಕೀಯ ಪರೀಕ್ಷೆಯಲ್ಲಿಯೂ ತೇರ್ಗಡೆಯಾಗಿ ಈಗ ಶಸಸ್ತ್ರ ಪಡೆಗೆ ಹೋಗುತ್ತಿರುವುದು ಸಂತಸ ತಂದಿದೆ ನನ್ನ ಗ್ರಾಮೀಣ ಪ್ರದೇಶದ ಯುವಕರು ದುಶ್ಚಟಗಳಿಗೆ ಬಲಿಯಾಗದೆ ಶರೀರವನ್ನು ಚೆನ್ನಾಗಿ ಕಾಪಾಡಿಕೊಳ್ಳಬೇಕು *2ನೇ ಪುಟಕ್ಕೆ*

# ಕೇಂದ್ರ ತಂಡ ಮದ್ಲಾಪೂರು ಮತ್ತು ಪೋತ್ನಾಳ ಗ್ರಾಮ ಪಂಚಾಯತಿಗೆ ಬೇಟಿ ಹಾಗೂ ನರೇಗಾ ಕಾಮಗಾರಿ ಪರಿಶೀಲನೆ:

ಧೈರ್ಯದ ದಾರಿ

**ಮಾನ್ವಿ,ಫೆ.18–** ತಾಲ್ಲೂಕಿನ ಮದ್ಲಾಪೂರು ಪಂಚಾಯತಿಗಳಲ್ಲಿ ನರೇಗಾ ಯೋಜನೆಯಡಿ ಅನುಷ್ಠಾನಗೊಂಡ ಕಾಮಗಾರಿಗಳನ್ನು ಕೇಂದ್ರ ಆಡಿಟ್ ತಂಡದ ಅಧಿಕಾರಿ ಶ್ರೀ ಕುಮುದ್ ದುಬೆ ರವರು ಭೇಟಿ ನೀಡಿ ಪರಿಶೀಲಿಸಿದರು.

ಮೊದಲಿಗೆ ಮದ್ಲಾಪೂರು ಗ್ರಾಮ ಪಂಚಾಯತಿ ಕಛೇರಿಗೆ ಭೇಟಿ ನೀಡಿ ಕಾಮಗಾರಿ ಕಡತ, 7 Register, NMMS ಹಾಜರಾತಿಗಳಿಗೆ ಸಂಬಂಧಿಸಿದ ಮಾಹಿತಿಯನ್ನು ಪಡೆದುಕೊಂಡರು.ನಂತರ 1)ಮದ್ಲಾಪುರ್ ಗ್ರಾಮದ ಅಬ್ಬಯ್ಯ ನ ಹೊಲದಿಂದ ಬಸಯ್ಯ ನ ಹೊಲದವರೆಗೆ ನಾಲಾ ಅಭಿವೃದ್ಧಿ, 2)ಚಿಕಲ್ಪರ್ವಿ ಗ್ರಾಮದ ಸೀನಪ್ಪ ಹೊಲದಿಂದ ಕೊಡಗಿಡ್ಡ ಹಳ್ಳದವರೆಗೆ ನಾಲಾ ಅಭಿವೃದ್ಧಿ ಕಾಮಗಾರಿಗಳನ್ನು ಪರಿಶೀಲನೆ



ಮಾಡುವುದರ ಜೊತೆಗೆ ಕಾಮಗಾರಿ ಕಡತಗಳನ್ನು ಪರಿಶೀಲನೆ ಮಾಡಿದರು ಮತ್ತು ಅಳತೆ ಪ್ರಮಾಣ ಪರಿಶೀಲನೆ ಮಾಡಿದರು, ನಂತರ ಪೋತ್ನಾಳ ಗ್ರಾಮ ಪಂಚಾಯತಿಗೆ ಬೇಟಿ ನೀಡಿ 7 ರಿಜಿಸ್ಟರ್ ಗಳ ಪರಿಶೀಲನೆ, ದೂರು ದಾಖಲೆಗಳ ರಿಜಿಸ್ಟರ್ , ಆಸ್ತಿವಹಿ ರೆಜಿಸ್ಟರ್, ಔಟಿರಾಟಿರ ಕಾಮಗಾರಿ ಲೀಸ್ಟ್ ಪಡೆದುಕೊಂಡು ಪರಿಶೀಲನೆ ಮಾಡಿ, 2ನೇಪುಟಕ್ಕೆ►

ಮೊದಲನೇ ಪುಟದಿಂದ

# ಮಾಧ್ಯಮವನ್ನು ಹತ್ತಿಕ್ಕಲು ಯತ್ನಿಸುತ್ತಿದೆಯೇ ಕುರ್ಚಿ ಕಚ್ಚಾಟದಲ್ಲಿರುವ ಗ್ಯಾರಂಟಿ ಸರ್ಕಾರ..?

ಕಡೆ ಮಾತ್ರ ಸಂಬಂಧಪಟ್ಟವರಿಂದ ಸಂದರ್ಶನ/ಬೈಟ್ ತೆಗೆದುಕೊಳ್ಳುವಂತೆ ಸೂಚನೆ ನೀಡಲಾಗಿದೆ.ವಾರ್ತಾ ಮತ್ತು ಪ್ರಚಾರ ಇಲಾಖೆಯು ಶಿಫಾರಸ್ಸು ಮಾಡಿರುವ ಮಾಧ್ಯಮ ಪ್ರತಿನಿಧಿಗಳಿಗೆ ಮಾತ್ರ ವಿಧಾನಸೌಧದಲ್ಲಿ ಗುರುತಿನ ಚೀಟಿ ವಿತರಿಸಲಾಗುತ್ತದೆ. ಈ ರೀತಿ ಗುರುತಿನ ಚೀಟಿ ಹೊಂದಿರುವ ಎಲ್ಲಾ ಪತ್ರಿಕಾ ಮಾಧ್ಯಮ ಪ್ರತಿನಿಧಿಗಳಿಗೆ ಭದ್ರತೆಯ ಹಿತದೃಷ್ಟಿಯಿಂದ ವಿಧಾನಸೌಧದ ಪಶ್ಚಿಮ ದ್ವಾರದ ಪೋರ್ಟಿಕೋ ಬಳಿ ನಿಗದಿಪಡಿಸಲಾಗಿರುವ ಸ್ಥಳದಲ್ಲಿ ಮಾತ್ರ ಬೈಟ್ ತೆಗೆದುಕೊಳ್ಳಬೇಕೆಂದು ಪ್ರಕಟಣೆಯಲ್ಲಿ ಸೂಚಿಸಲಾಗಿದೆ.

ವಿಧಾನಸೌಧದ ಒಳಪ್ರವೇಶಿಸುವ ಸಂದರ್ಭದಲ್ಲಿ ಮುಖ್ಯಮಂತ್ರಿ, ಉಪಮುಖ್ಯಮಂತ್ರಿ, ಸಚಿವರು, ಗಣ್ಯ ವ್ಯಕ್ತಿಗಳು ಸೇರಿದಂತೆ ಮತ್ತಿತರರಿಂದ ಮಾಧ್ಯಮದವರು ಬೈಟ್ ತೆಗೆದುಕೊಳ್ಳಲು ಹಿಂಬಾಲಿಸದಂತೆ ಸೂಚನೆ ಕೊಟ್ಟಿದ್ದಾರೆ.

ಎಡೆಮಾಡಿಕೊಟ್ಟ ವಿವಾದ : ವಾರ್ತಾ ಮತ್ತು ಪ್ರಚಾರ ಇಲಾಖೆಯು ಹೊರಡಿಸಿರುವ ಈ ಪ್ರಕಟಣೆ ಪರೋಕ್ಷವಾಗಿ ಮಾಧ್ಯಮಗಳನ್ನು ಸರ್ಕಾರ ನಿಯಂತ್ರಣಕ್ಕೆ ತೆಗೆದುಕೊಳ್ಳುವ ಹುನ್ನಾರ ಎಂಬ ಆರೋಪ ಕೇಳಿಬಂದಿದೆ.ಕೆಲ ದಿನಗಳ ಹಿಂದೆ ನಗರಾಭಿವೃದ್ಧಿ ಸಚಿವ ಭೈರತಿ ಸುರೇಶ್ ಅವರ ಕಚೇರಿಯಲ್ಲೆ? ಕಳ್ಳತನ ನಡೆದಿದ್ದು, ಸರ್ಕಾರಕ್ಕೆ ತೀವ್ರ ಇರಿಸುಮುರಿಸು ಉಂಟು ಮಾಡಿತ್ತು.

ಭಾರೀ ಬಿಗಿಭದ್ರತೆ ಇರುವ ಶಕ್ತಿ ಕೇಂದ್ರದಲ್ಲೆ? ಕಳ್ಳತನ ನಡೆದಿದ್ದು, ಸರ್ಕಾರಕ್ಕೆ ನುಂಗಲಾರದ ತುತ್ತಾಗಿ ಪರಿಣಮಿಸಿತ್ತು. ಈಗ ಭದ್ರತೆಯ ನೆಪದಲ್ಲಿ ಆಡಳಿತ ಮತ್ತು ಸಿಬ್ಬಂದಿ ಸುಧಾರಣಾ ಇಲಾಖೆ ವಾರ್ತಾ ಇಲಾಖೆಯ ಮೂಲಕ ಮಾಧ್ಯಮವನ್ನು ನಿಯಂತ್ರಣಕ್ಕೆ ತೆಗೆದುಕೊಳ್ಳಲು ಹೊರಟಿದೆ ಎಂಬ ಆರೋಪ ಕೇಳಿಬಂದಿದೆ.

ಸಾಮಾನ್ಯವಾಗಿ ವಿಧಾನಸೌಧದಲ್ಲಿ ಮಾಧ್ಯಮದವರು ಕೆಂಗಲ್ ಹನುಮಂತಯ್ಯ ಗೇಟ್, ಸಮಿತಿ ಕೊಠಡಿ, ಸಮೆ?ಳನ ಸಭಾಂಗಣ, ಸಚಿವರ ಕೊಠಡಿ ಸೇರಿದಂತೆ ಲಭ್ಯವಿರುವ ಕಡೆ ಸಿಎಂ, ಡಿಸಿಎಂ, ಸಚಿವರು ಹಾಗೂ ಶಾಸಕರು ಸೇರಿದಂತೆ ಮತ್ತಿತರರಿಂದ ಬೈಟ್‌ಗಳನ್ನು ತೆಗೆದುಕೊಳ್ಳುವುದು ಹಲವಾರು ವರ್ಷಗಳಿಂದ ನಡೆದುಕೊಂಡು ಬಂದಿದೆ.

ಹಿಂದೆಯೂ ಹೊರಡಿಸಿದ್ದ ಅಧಿಸೂಚನೆ : ಸಿದ್ದರಾಮಯ್ಯ ಅವರು ಈ ಹಿಂದೆ 2013-2018 ರಲ್ಲಿ ಮುಖ್ಯಮಂತ್ರಿಯಾಗಿದ್ದ ವೇಳೆಯೂ ವಿಧಾನಸೌಧದಲ್ಲಿ ಮಾಧ್ಯಮಗಳಿಗೆ ನಿಯಂತ್ರಣಕ್ಕೆ ತೆಗೆದುಕೊಳ್ಳುವ ಅಧಿಸೂಚನೆಯನ್ನು ಹೊರಡಿಸಿದ್ದರು. ವಿಧಾನಸೌಧದ ಬದಲು ವಾರ್ತಾ ಇಲಾಖೆಯಲ್ಲಿ ಸಚಿವರ ಮತ್ತು ಸಂಬಂಧಪಟ್ಟವರು ಪತ್ರಿಕಾಗೋಷ್ಠಿ ನಡೆಸುವಂತೆ ಸೂಚನೆ ಕೊಟ್ಟಿದ್ದರು. ಇದು ತೀವ್ರ ವಿವಾದ ಸೃಷ್ಟಿಸಿದ್ದರಿಂದ ಕೊನೆಗೆ ಅಧಿಸೂಚನೆಯನ್ನೆ ಹಿಂಪಡೆಯಲಾಗಿತ್ತು.

ಸಾಮಾನ್ಯವಾಗಿ ತಮಿಳುನಾಡಿನಲ್ಲಿ ಮಾತ್ರ ಇಂತಹ ಶಿಷ್ಟಾಚಾರ ಇದೆ. ಮಾಜಿ ಮುಖ್ಯಮಂತ್ರಿ ದಿ.ಜಯಲಲಿತಾ ಅಧಿಕಾರವಧಿಯಲ್ಲಿ ಮಾತ್ರ ವಿಧಾನಸೌಧದಲ್ಲಿ ಮಾಧ್ಯಮದವರು ಬೈಟ್ ತೆಗೆದುಕೊಳ್ಳದಂತೆ ಸಂಪೂರ್ಣವಾಗಿ ನಿರ್ಬಂಧ ಹಾಕಲಾಗಿತ್ತು. ಸಚಿವರ ಪತ್ರಿಕಾಗೋಷ್ಠಿಗಳನ್ನು ವಾರ್ತಾ ಇಲಾಖೆ ಕಚೇರಿಯಲ್ಲಿ ನಡೆಸಲಾಗುತ್ತಿತ್ತು. ಸಂಬಂಧಪಟ್ಟ ಕೆಲಸವಿದ್ದಾಗ ಮಾತ್ರ ಮಾಧ್ಯಮದವರು ವಿಧಾನಸೌಧಕ್ಕೆ ಬರಬೇಕಿತ್ತೆ? ಹೊರತು ಕಾರಣವಿಲ್ಲದೆ ಬಾರದಂತೆ ಕಡಿವಾಣ ಹಾಕಲಾಗಿತ್ತು.

## ಕೇಂದ್ರ ತಂಡ ಮದ್ಲಾಪೂರು ಮತ್ತು ಪೋತ್ನಾಳ ಗ್ರಾಮ ಪಂಚಾಯತಿಗೆ ಬೇಟಿ ಹಾಗೂ ನರೇಗಾ ಕಾಮಗಾರಿ ಪರಿಶೀಲನೆ:

ಸಮಾಜಿಕ ಲೆಕ್ಕ ಪರಿಶೋದನ ಗ್ರಾಮ ಸಭೆ,ಗ್ರಾಮ ಪಂಚಾಯತಿಯ ನಡಾವಳಿಗಳು ಪರಿಶೀಲನೆ ಮಾಡಿದರು, ನಂತರ ಕೇಲವು ಕಾಮಗಾರಿ ಅಯ್ಕೆಮಾಡಿ, ಕಾಮಗಾರಿ ವೀಕ್ಷಣೆ ಗಾಗಿ ಕ್ಷೇತ್ರ ಬೇಟಿ ನೀಡಿದರು,

ಪೋತ್ನಾಳ ಗ್ರಾಮ ಪಂಚಾಯತಿಯ ಜೀನೂರು ಕ್ಯಾಂಪಿನ ರಸ್ತೆಯಿಂದ ನರಸಯ್ಯನ ಹೊಲದವರೆಗೆ ನಾಲಾ ಹೂಳು ಎತ್ತುವ ಕಾಮಗಾರಿ ವೀಕ್ಷಣೆ ಮಾಡಿ, ಕಾಮಗಾರಿ ಕಡತಗಳ ಪರಿಶೀಲನೆ, ಕಾಮಗಾರಿ ಗುಣ ಮಟ್ಟ ಪರಿಶೀಲನೆ ಮಾಡಿದರು,

ಸದರಿ ಸಂದರ್ಭದಲ್ಲಿ ತಾ.ಪಂ ಕಾರ್ಯನಿರ್ವಾಹಕ ಅಧಿಕಾರಿ ಶ್ರೀ ಖಾಲೀದ್ ಅಹಮದ್, ಪಂಚಾಯತ ಅಭಿವೃದ್ಧಿ ಅಧಿಕಾರಿಗಳಾದ ಅಸ್ರಾ ಜಬೀನಾ ಖಾನ್ ಮತ್ತು ಅಕ್ತರ ಪಾಷ, ತಾಂತ್ರಿಕ ಸಂಯೋಜಕರು, ತಾಂತ್ರಿಕ ಸಹಾಯಕರು, ಐಇಸಿ ಸಂಯೋಜಕರು, ಟಿಎಸ್ ಸಂಯೋಜಕರು, ಸಾಮಾಜಿಕ ಲೆಕ್ಕ ಪರಿಶೋಧನ ಸಂಯೋಜಕರು ಹಾಗೂ ಗ್ರಾ.ಪಂ ಸಿಬ್ಬಂದಿಗಳು ಹಾಜರಿದ್ದರು.

## ದುಶ್ಚಟಗಳಿಗೆ ಬಲಿಯಾಗಬೇಡಿ ಮಹೇಶ್ ಬೆಟ್ಟದೂರ್

ಜೆಲ್ಲಿ ಶಿವರಾಜ್ ನಾಯಕ ನೀರಮಾನ್ವಿ ಮಾತನಾಡಿ ನಮ್ಮ ತಂದೆ ಸ್ವಂತ ದುಡಿದು ನನ್ನನ್ನು ಚೆನ್ನಾಗಿ ಅಭ್ಯಾಸ ಮಾಡಿಸಿ ಈ ಮಟ್ಟಕ್ಕೆ ತಂದಿದ್ದಾರೆ ನಾನು ನಮ್ಮ ತಂದೆ ತಾಯಿಗಳ ಗುರುಗಳ ಋಣ ತೀರಿಸಲು ಸಾಧ್ಯವಿಲ್ಲ

ಕೇಂದ್ರೀಯ ಶಶಸ್ತ್ರ ಪಡೆಗಳ ತಾಲೂಕ ಅಧ್ಯಕ್ಷರಾದ ಬಸವರಾಜ್ ನಾಯಕ್ ಮುಸ್ಟೂರು ಮಾತನಾಡಿ ಮಾನ್ವಿ ತಾಲೂಕಿನ ಯುವಕರ ಬಳಗ ಸೈನಿಕರಗಷ್ಟೇ ಮೀಸಲಾಗದೆ ದೀನ ದಲಿತರ ಬಡವರ ಪರನಿಂತು ಕೆಲಸ ಮಾಡಿ ಕೊಡಬೇಕೆಂದರು ಈ ಮಾನ್ವಿ ತಾಲೂಕಿನ ಯುವಕರ ಬಳಗದ ಕಾರ್ಯ ಶ್ಲಾಘನೀಯವಾಗಿದೆ ಈ ಸಂದರ್ಭದಲ್ಲಿ ನಿವೃತ್ತ ಯೋಧರು ಹಾಲಿ ಯೋದರು ತಮ್ಮ ಅನಿಸಿಕೆ ಹಂಚಿಕೊಂಡರು ಈ ಒಂದು ಕಾರ್ಯಕ್ರಮದಲ್ಲಿ ತಾಲೂಕಿನ ಯುವ ಬಳಗ ಕೊರವಿ ಗ್ರಾಮದ ಹಿರಿಯ ಮುಖಂಡರು ಯುವಕರು ಹಾಗೂ ಸಾದಾಪುರ ಸೀಕಲ್ ನೀರಮಾನ್ವಿ ಗ್ರಾಮದ ದೇಶಪ್ರೇಮಿಗಳು ಹಾಜರಿದ್ದು ಕಾರ್ಯಕ್ರಮ ಯಶಸ್ವಿಗೊಳಿಸಿದರು

# ಭದ್ರೇಶ್ವರ ಜಾತ್ರೆ: ಪೂರ್ವಭಾವಿ ಸಭೆ



**ಬೀದರ್ :ಫೆ.18**:ತಾಲ್ಲೂಕಿನ ಬಾವಗಿ ಗ್ರಾಮದಲ್ಲಿ ಭದ್ರೇಶ್ವರ ಜಾತ್ರೆ ಪ್ರಯುಕ್ತ ಪೂರ್ವಭಾವಿ ಸಭೆ ನಡೆಯಿತು.

ಭದ್ರೇಶ್ವರ ಮಠದ ಪೀಠಾಧಿಪತಿಗಳು ಶ್ರೀ ಶಿವಕುಮಾರ್ ಸ್ವಾಮೀಜಿ ಭದ್ರೇಶ್ವರ ಜಾತ್ರಾ ಸಮಿತಿ ನೇತೃತ್ವದಲ್ಲಿ ನಿರ್ಣಯಗಳನ್ನು ಮಂಡಿಸಲಾಯಿತು.ದೇವಸ್ಥಾನಕ್ಕೆ ಸುಣ್ಣಬಟ್ಟ ಚರ್ಚಿಸಲಾಯಿತು. ಜಾತ್ರೆ ಅಂಗವಾಗಿ ಮಾ.24 ರಿಂದ ಏಪ್ರಿಲ್ 3 ರವರೆಗೆ ‘ ದಾನಮ್ಮ ದೇವಿಯ ವಿಷಯದ ಮೇಲೆ ಪ್ರವಚನ ಕಾರ್ಯಕ್ರಮ ಏರ್ಪಡಿಸಲು ತೀರ್ಮಾನಿಸಲಾಯಿತು

ಜಾತ್ರಾ ಮಹೋತ್ಸವದ ಸಮಿತಿಯ ಗೌರವ ಅಧ್ಯಕ್ಷರನ್ನಾಗಿ ಚನಮಲ್ಲಪ್ಪ ಹಜ್ಜರಗಿ ಅವರನ್ನು ನೇಮಿಸಲಾಯಿಂತು

ಸಭೆ ಉದ್ದೇಶಿಸಿ ಮಾತನಾಡಿದ ಭದ್ರೇಶ್ವರ ಮಠದ ಶ್ರೀ ಶಿವುಕುಮಾರ ಸ್ವಾಮೀಜಿ ಗ್ರಾಮದ ಭಕ್ತರು ತಮ್ಮ ತನು ಮನ-ಧನದಿಂದ ಈ ಜಾತ್ರೆ ಯಶಸ್ಸಿಗೆ ಶ್ರಮಿಸಬೇಕು' ಎಂದು ತಿಳಿಸಿದರು.

ಪ್ರಮುಖಾರದ ಆನಂದ್ ಸ್ವಾಮಿ ನಾಗಶಟ್ಟಿ ಅಳ್ಳಿ ಸಂತೋಷ್ ಜಗ್ಗಾಳೆ ಶಿವಕುಮಾರ್ ರೀಶೆಟ್ಟಿ ಕಾಶಿನಾಥ್ ಪಕ್ಕ ಜಗನ್ನಾಥ್ ಚಿದ್ರಿ ಸಂಗಮೇಶ ಹಜ್ಜರಗಿ ರೇವಣ್ಣಪ್ಪ ಭದ್ರಣ್ಣ ಕಾಶಿನಾಥ್ ಟಿ ರಾಜಕುಮಾರ ಪಾಟೀಲ, ರಾಜಕುಮಾರ್ ಭದ್ರಣ್ಣೆ ರಾಜಕುಮಾರ್ ವಾಡಿ ಶಿವಕುಮಾರ್ ಭದ್ರಸಾಯಿ ನಾಗೇಶ್ ಮಡಿವಾಳಪ್ಪ ಸುನೀಲ ಲೋಕೇಶ್ ಸಾಯಿ ಕುಮಾರ್ ನಾಗೇಶ್ ಹಾಗು ಭಕ್ತರು ಪಾಲ್ಗೊಂಡಿದ್ದರು.

# ರಾಯಚೂರು ಜಿಲ್ಲೆಯಲ್ಲಿ ಸಫಾಯಿ ಕರ್ಮಚಾರಿ ಆಯೋಗದ ಅಧ್ಯಕ್ಷರ ಪ್ರವಾಸ

**ರಾಯಚೂರು ಫೆ,18-**: ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿ ಆಯೋಗದ ಅಧ್ಯಕ್ಷರಾದ ಪಿ ರಘು ಅವರು ಫೆ.19ರಂದು ರಾಯಚೂರು ಜಿಲ್ಲೆಯಲ್ಲಿ ಪ್ರವಾಸ ಕೈಗೊಂಡಿದ್ದಾರೆ.

ಫೆ.19ರ ಬೆಳಗ್ಗೆ 7 ಗಂಟೆಗೆ ರಾಯಚೂರಿನಿಂದ ನಿರ್ಗಮಿಸಿ 8 ಗಂಟೆಗೆ ಮಂತ್ರಾಲಯಕ್ಕೆ ತೆರಳಿ ಶ್ರೀ ರಾಘವೇಂದ್ರ ಮಠಕ್ಕೆ ಭೇಟಿ ನೀಡುವರು. ಬಳಿಕ 10 ಗಂಟೆಗೆ ರಾಯಚೂರು ನಗರಕ್ಕೆ ಆಗಮಿಸಿ 10.30ಕ್ಕೆ ರಿಮ್ಸ್ ಆಸ್ಪತ್ರೆಗೆ ಭೇಟಿ ನೀಡುವರು. ಕಾರ್ಮಿಕರ ಕುಂದುಕೊರತೆಗಳನ್ನು ಆಲಿಸುವರು. ಬೆಳಗ್ಗೆ 11 ಗಂಟೆಗೆ ಮಹಾನಗರ ಪಾಲಿಕೆಯಲ್ಲಿ ಕೆಲಸ ನಿರ್ವಹಿಸುತ್ತಿರುವ ಎಲ್ಲಾ ಪೌರ ಕಾರ್ಮಿಕರು ಮತ್ತು ಇತರೆ ಸಂಸ್ಥೆಗಳ ಸ್ವಚ್ಛತಾ ಕಾರ್ಮಿಕರೊಂದಿಗೆ ನೇರ ಸಂವಾದ ಕಾರ್ಯಕ್ರಮ ನಡೆಸುವರು. ಮಧ್ಯಾಹ್ನ 12.30ಕ್ಕೆ ಜಿಲ್ಲೆಯ ನಗರ ಸ್ಥಳೀಯ ಸಂಸ್ಥೆಗಳು, ಗ್ರಾಮ ಪಂಚಾಯಿತಿಗಳು ಮತ್ತು ಇತರೆ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸ್ವಚ್ಛತಾ ಕಾರ್ಮಿಕರು, ಪೌರ ಕಾರ್ಮಿಕರಿಗೆ ಸಂಬಂಧಿಸಿದಂತೆ ಅಧಿಕಾರಿಗಳೊಡನೆ ಪ್ರಗತಿ ಪರಿಶೀಲನೆ ನಡೆಸುವರು. ಬಳಿಕ ರಾಯಚೂರಲ್ಲಿ ವಾಸ್ತವ್ಯ ಮಾಡುವರು. ಫೆ.20ರಂದು ಕೇಂದ್ರ ಸ್ಥಾನ ಬೆಂಗಳೂರಿಗೆ ಪ್ರಯಾಣ ಬೆಳೆಸುವರು ಎಂದು ಪ್ರಕಟಣೆ ತಿಳಿಸಿದೆ.

# ಫೆ.24ರಂದು ಯೋಗಿ ನಾರೇಯಣ ಯತೀಂದ್ರರ ಜಯಂತಿ ಪೂರ್ವಭಾವಿ ಸಭೆ

**ರಾಯಚೂರು ಫೆ,18-**: ಮಾರ್ಚ 3ರಂದು ಶ್ರೀ ಯೋಗಿನಾರೇಯಣ ಯತೀಂದ್ರರ (ಕೈವಾರ ತಾತಯ್ಯ) ಜಯಂತಿ ಆಚರಣೆ ಹಿನ್ನೆಲೆಯಲ್ಲಿ ಪೂರ್ವಭಾವಿ ಸಿದ್ಧತಾ ಸಭೆಯು ಫೆ.24ರ ಮಧ್ಯಾಹ್ನ 12 ಗಂಟೆಗೆ ಯಕ್ಲಾಸಪುರ ನೂತನ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಅಪರ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಕರೆಯಲಾಗಿದೆ. ಸಂಘ ಸಂಸ್ಥೆಗಳ ಪ್ರತಿನಿಧಿಗಳು ಮತ್ತು ಅಧಿಕಾರಿಗಳು ಸಭೆಗೆ ಆಗಮಿಸಲು ಕೋರಿದೆ ಎಂದು ಪ್ರಕಟಣೆ ತಿಳಿಸಿದೆ.

# ಗಣೇಕಲ್ ಜಲಾಶಯದ ಕಾಲುವೆಗಳ ಸುತ್ತ ನಿಷೇಧಾಜ್ಞೆ ಜಾರಿ

**ರಾಯಚೂರು ಫೆ,18-**:: ಗಣೇಕಲ್ ಜಲಾಯಶದಿಂದ ರಾಂಪೂರ ಕುಡಿಯುವ ನೀರಿನ ಜಲಾಶಯಕ್ಕೆ ನೀರನ್ನು ಹರಿಸುವ ವಿತರಣಾ ಕಾಲುವೆ 95, 96, 98, 98ಎ, 98ಬಿ, 99ಎ, 99 ಮತ್ತು 100ರವರೆಗೆ ಕಾಲುವೆಯ ಸುತ್ತಲಿನ ಪ್ರದೇಶದ ವ್ಯಾಪ್ತಿಯಲ್ಲಿ ಶಾಂತಿ, ಕಾನೂನು ಮತ್ತು ಸುವ್ಯವಸ್ಥೆ ಕಾಪಾಡುವ ಹಾಗೂ ಸಾರ್ವಜನಿಕರ ಹಿತದೃಷ್ಟಿಯಿಂದ ಯಾವುದೇ ಅಹಿತಕರ ಘಟನೆಗಳು ಜರುಗದಂತೆ ಫೆ.17ರಿಂದ ಮಧ್ಯರಾತ್ರಿ 12 ಗಂಟೆಯಿಂದ ಫೆ.21ರ ಮಧ್ಯೆರಾತ್ರಿ 12 ಗಂಟೆವರೆಗೆ 100 ಮೀಟರಗಳ ವಿತರಣಾ ಕಾಲುವೆಗಳ ಸುತ್ತುವರೆದ ಪ್ರದೇಶದ ವ್ಯಾಪ್ತಿಯಲ್ಲಿ ನಿಷೇಧಾಜ್ಞೆ ಜಾರಿಗೊಳಿಸಿ ಜಿಲ್ಲಾ ದಂಡಾಧಿಕಾರಿಗಳು ಆಗಿರುವ ಜಿಲ್ಲಾಧಿಕಾರಿಗಳಾದ ನಿತೀಶ್ ಕೆ ಅವರು ಆದೇಶ ಹೊರಡಿಸಿದ್ದಾರೆ.

# ಫೆ.21ರಂದು ಪೂರ್ವಭಾವಿ ಸಭೆ

**ರಾಯಚೂರು ಫೆ,18-**:: ಫೆ.28 ರಿಂದ ಮಾರ್ಚ 17ರವರೆಗೆ ದ್ವಿತೀಯ ಪಿಯುಸಿ ಪರೀಕ್ಷೆಗಳು ನಡೆಯಲಿದ್ದು, ಪರೀಕ್ಷೆಗಳನ್ನು ಸುಗಮವಾಗಿ ಮತ್ತು ಯಶಸ್ವಿಯಾಗಿ ನಡೆಸುವ ಸಂಬಂಧ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಪೂರ್ವಭಾವಿ ಸಿದ್ಧತಾ ಸಭೆಯು ಫೆ.21ರ ಬೆಳಗ್ಗೆ 11 ಗಂಟೆಗೆ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ನಡೆಯಲಿದೆ. ಸಂಬಂಧಿಸಿದ ಅಧಿಕಾರಿಗಳು ಸಭೆಗೆ ಖುದ್ದು ಹಾಜರಾಗಬೇಕು ಎಂದು ಜಿಲ್ಲಾಧಿಕಾರಿಗಳ ಕಚೇರಿಯ ಪ್ರಕಟಣೆ ತಿಳಿಸಿದೆ.

# ಫೆ.24ರಂದು ರೇಣುಕಾಚಾರ್ಯ ಜಯಂತಿ ಪೂರ್ವಭಾವಿ ಸಭೆ

**ರಾಯಚೂರು ಫೆ,18-**::ಮಾರ್ಚ 1ರಂದು ಶ್ರೀ ರೇಣುಕಾಚಾರ್ಯ ಜಯಂತಿ ಆಚರಣೆ ಹಿನ್ನೆಲೆಯಲ್ಲಿ ಪೂರ್ವಭಾವಿ ಸಿದ್ಧತಾ ಸಭೆಯು ಫೆ.24ರ ಬೆಳಗ್ಗೆ 11 ಗಂಟೆಗೆ ಯಕ್ಲಾಸಪುರ ನೂತನ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಅಪರ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಕರೆಯಲಾಗಿದೆ. ಸಂಘ ಸಂಸ್ಥೆಗಳ ಪ್ರತಿನಿಧಿಗಳು ಮತ್ತು ಅಧಿಕಾರಿಗಳು ಸಭೆಗೆ ಆಗಮಿಸಲು ಕೋರಿದೆ ಎಂದು ಪ್ರಕಟಣೆ ತಿಳಿಸಿದೆ.

## ಅಧ್ಯಯನ ನಿರಂತರವಾಗಿರಲಿ: ಡಾ.ಸಿ.ಸೋಮಶೇಖರ




**ಕಲಬುರಗಿ,ಫೆ.18-**ಓದು ನಿರಂತರವಾದರೆ ಜ್ಞಾನ ಮತ್ತು ಪರೀಕ್ಷೆ ಫಲಿತಾಂಶ ಉತ್ತಮವಾಗುತ್ತದೆ. ಸಾಧನೆಗೆ ಬಡತನ ಅಡ್ಡಿ ಬರಬಾರದು ಜ್ಞಾನದ ಹಸಿವು ಮಕ್ಕಳಲ್ಲಿ ಇದ್ದಾಗ ಜೀವನ ಯಶಸ್ವಿಯಾಗುತ್ತದೆ ಎಂದು ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಮಾಜಿ ಅಧ್ಯಕ್ಷರಾದ ಡಾ.ಸಿ.ಸೋಮಶೇಖರ ಹೇಳಿದರು.

ನಗರದ ಸತ್ಯಂ ಪದವಿ ಪೂರ್ವ ಕಾಲೇಜಿನಲ್ಲಿ ಪ್ರಥಮ ಪಿಯುಸಿ ವಿದ್ಯಾರ್ಥಿಗಳ ವತಿಯಿಂದ ದ್ವಿತೀಯ ಪಿಯುಸಿ ವಿದ್ಯಾರ್ಥಿಗಳ ಬಿಳ್ಕೊಡುಗೆ ಸಮಾರಂಭದಲ್ಲಿ ಕಾರ್ಯಕ್ರಮ ಉದ್ಘಾಟಿಸಿ ಮಕ್ಕಳು ಓದಿನ ಕಡೆ ಗಮನ ಕೊಟ್ಟು ಹೆಚ್ಚು ಅಂಕಗಳನ್ನು ಪಡೆಯುವಲ್ಲಿ ಹಾಗೂ ಯಶಸ್ವಿಯಾಗಲು ಶಿಕ್ಷಕರ ಶ್ರಮ ಅವಶ್ಯಕತೆ ಇದೆ ಎಂದು ಹೇಳಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕಾಲೇಜಿನ ಪ್ರಾಂಶುಪಾಲ ಬಿ.ಎಚ್. ನಿರಗುಡಿವಹಿಸಿ ವಿದ್ಯಾರ್ಥಿಗಳು ಸತತ ಅಭ್ಯಾಸ ಮಾಡಿ ಗುರಿ ಮುಟ್ಟುವ ಕಡೆ ಪ್ರಯತ್ನ ಮಾಡಿ ಮುಂದಿನ ಭವಿಷ್ಯ ಉಜ್ವಲ ಮಾಡಿಕೊಳ್ಳಿ ಮೋಬೈಲ್ನಿಂದ ದೂರವಿರಿ ಎಂದು ಕರೆ ನೀಡಿದರು.

ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ ಗುರೂಜಿ ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾದ ಕಲ್ಯಾಣರಾವ ಶೀಲವಂತ ಅವರು ಮಾತನಾಡುತ್ತಾ ಮಕ್ಕಳು ತರಗತಿಯಲ್ಲಿ ಉಪನ್ಯಾಸಕರು ಹೇಳಿದ ವಿಷಯಗಳನ್ನು ಸರಿಯಾಗಿ ಮನನ ಮಾಡಿಕೊಂಡು ಓದಿದಾಗ ನಮ್ಮ ಗುರಿ ಮುಟ್ಟಲು ಸಾಧ್ಯವಾಗುತ್ತದೆ. ವಿದ್ಯರ್ಥಿಗಳಲ್ಲಿ ಕನಸು ದೊಡ್ಡದಾಗಿರಬೇಕು ಎಂದು ಹೇಳಿದರು. ಮುಖ್ಯ ಅತಿಥಿಗಳಾದ ದಿಶಾ ಪಿಯು ಕಾಲೇಜಿನ ಅಧ್ಯಕ್ಷರಾದ ಶಿವಾನಂದ ಖಜೂರಿ ವೇದಿಕೆ ಮೇಲೆ ಉಪಸ್ಥಿತರಿದ್ದರು

ಕಾರ್ಯಕ್ರಮದ ನಿರೂಪಣೆ ವಿಧ್ಯಾರ್ಥಿನಿ ಮೇಘನಾ ಹಾಗೂ ಸಂಜೀವಿನಿ ಮಾಡಿದರು. ಅಂಜಲಿ ಹಾಗೂ ಮಸೆಮ್ಮ ಪ್ರಾರ್ಥನೆ ಮಾಡಿದರು.ಸ್ನೇಹಾ ಸ್ವಾಗತ ಮಾಡಿದರು .ನಂತರ ವಿದ್ಯಾರ್ಥಿಗಳ ಸಾಂಸ್ಕೃತಿಕ ಕಾರ್ಯಕ್ರಮಗಳೂ ಜರುಗಿದವು. ಕಾರ್ಯಕ್ರಮದಲ್ಲಿ ಸಂಸ್ಥೆಯ ಉಪನ್ಯಾಸಕರಾದ ಮಹೇಶ್ ಗಡಗಿ, ಸಂತೋಷ ಪಿಳ್ಳೆ , ಕಾಶೀನಾಥ್ ಪಂಚಾಳ ಸಚ್ಚಿದಾನಂದ ಪಾಟೀಲ್,ರೂಪಾ ಕುಲಕರ್ಣಿ, ರಾಜೇಶ್ವರಿ ಸಾಲಿಮಠ, ನಿರ್ಮಲಾ ಕಣ್ಮುಸೆ, , ವಿಶ್ವಜೋತಿ ಮಠ, ಡಾ ಸುಲೋಚನಾ ಅಂಕಲಗಿ ಇದ್ದರು.ಎಲ್ಲಾ ವಿದ್ಯಾರ್ಥಿಗಳಿಗೆ ಪರೀಕ್ಷಾ ಪ್ಯಾಡ್, ಫೈಲ್, ಪೆನ್ನು ನೀಡಲಾಯಿತು.

ವಿದ್ಯಾರ್ಥಿಗಳು ಶಿಸ್ತು ಸಂಯುಮ ರೂಢಿಸಿಕೊಂಡು ಮೌಲ್ಯಯುತವಾಗಿ ಬದುಕುವುದನ್ನು ಕಟ್ಟಿಕೊಳ್ಳಬೇಕು ಹಾಗು ತಂದೆ ತಾಯಿಗಳ ಪ್ರೀತಿಗೆ ಪಾತ್ರರಾಗಿ ಸಂಸ್ಥೆಗೆ ಹೆಸರು ಬರುವಂತೆ ಅಭ್ಯಾಸ ಮಾಡಿ , ಭಯ ಬಿಟ್ಟು ಆತ್ಮವಿಶ್ವಾಸದಿಂದ ಪರೀಕ್ಷೆಯನ್ನು ಬರೆದು ಒಳ್ಳೆಯ ಫಲಿತಾಂಶ ಪಡೆಯಲು ಶ್ರಮವಹಿಸಿ ಎಂದು ವಿದ್ಯಾರ್ಥಿಗಳಿಗೆ ಕರೆ ಕೊಟ್ಟರು.

-ಶಿವಾನಂದ ಖಜೂರಗಿ, ಅಧ್ಯಕ್ಷರು ದಿಶಾ ವಿಜ್ಞಾನ ಪದವಿ ಪೂರ್ವ ಕಾಲೇಜು ಕಲಬುರಗಿ

# ಅಸಹನೀಯವಾಗದಿರಲಿ ವೃದ್ಧಾಪ್ಯ

ಕೆಲವು ವರ್ಷಗಳ ಹಿಂದೆ ತನ್ನ ಪತಿಯನ್ನು ಕಳೆದುಕೊಂಡ ಆ ಹೆಣ್ಣು ಮಗಳಿಗೆ ಓರ್ವ ಮಗ, ಸೊಸೆ ಹಾಗೂ ಓರ್ವ ಪುಟ್ಟ ಮೊಮ್ಮಗಳು ಇದ್ದರು. ಸಮಯ ಎಂದಿನಂತೆ ತನ್ನ ಗತಿಯಲ್ಲಿ ಸಾಗುತ್ತಿದ್ದು ಜೀವನ ತನ್ನದೇ ಆದ ರೀತಿಯಲ್ಲಿ ನಡೆಯುತ್ತಿತ್ತು.

ವರ್ಷಗಳು ಕಳೆದಂತೆ ನಿಧಾನವಾಗಿ ಆಕೆಯ ಕಣ್ಣಿನ ದೃಷ್ಟಿ ಮಂದವಾಗತೊಡಗಿತು ಆಕೆಯ ಗ್ರಹಣ ಶಕ್ತಿ ಕುಂದತೊಡಗಿದ್ದು ದಿನದಿಂದ ದಿನಕ್ಕೆ ನಿಶ್ಶಕ್ತಿ ಆಕೆಯನ್ನು ಆವರಿಸುತ್ತಿತ್ತು. ಆಕೆಯ ಕೈಗಳಲ್ಲಿ ನಡುಕ ಉಂಟಾಗಿ ಆಕೆ ಊಟ ಮಾಡುವಾಗ ತಿಂಡಿ ತಿನ್ನುವಾಗ ಚಹಾ ಕುಡಿಯುವಾಗ ತನ್ನ ಮೈ ಮೇಲೆ ಆಹಾರವನ್ನು ಚೆಲ್ಲಿಕೊಳ್ಳುತ್ತಿದ್ದಳು. ಮೊದಮೊದಲು ಕುಟುಂಬದ ಸದಸ್ಯರಿಗೆ ಇದು ಅಯ್ಯೋ ಪಾಪ! ಎಂಬ ಮರುಕ ಭಾವವನ್ನು ಹುಟ್ಟಿಸಿದರೆ ನಂತರದ ದಿನಗಳಲ್ಲಿ ಆಕೆಯ ಈ ಕ್ರಿಯೆ ತೀವ್ರ ಅಸಹನೆಗೆ ಕಾರಣವಾಗಿ ರೇಜಿಗೆಯಾಗಿ ಪರಿಣಮಿಸಿತು.

ಅದೊಂದು ದಿನ ಆಕೆಯ ಮಗ ಮತ್ತು ಸೊಸೆಗೆ ತಾಯಿಯ ಈ ತೊಂದರೆ ಅತಿರೇಕ ಎನ್ನಿಸಿ ಇದಕ್ಕೆ ಪರಿಹಾರ ಕಂಡುಕೊಳ್ಳುವ ನಿಟ್ಟಿನಲ್ಲಿ ಅಡುಗೆ ಮನೆಯ ಮೂಲೆಯೊಂದರಲ್ಲಿ ಆಕೆಗೊಂದು ಪುಟ್ಟ ಮೇಜನ್ನು ಅಣಿ ಮಾಡಿದರು.ಆ ಮೂಲೆಯಲ್ಲಿ ಸೊಸೆ ಯಾವಾಗಲೂ ಕಸಬರಿಗೆ, ಕಸದ ಬುಟ್ಟಿ ಹಾಗೂ ಅಡುಗೆ ಮಾಡಿದ ಪಾತ್ರೆಗಳು ಮತ್ತು ತಿಂದುಳಿದ ತಟ್ಟೆ ಲೋಟಗಳನ್ನು ಹಾಕುವ ಮುಸುರೆ ಪುಟ್ಟಿಯನ್ನು ಇಡುತ್ತಿದ್ದಳು. ಅದರ ಜೊತೆ ಮನೆಯನ್ನು ಸ್ವಚ್ಛಗೊಳಿಸುವ ಸೋಪ್ಗಳು ಡಿಟರ್ಜೆಂಟ್ ಗಳು ಲಿಕ್ವಿಡ್ ಗಳು ಕೂಡ ಅಲ್ಲಿರುತ್ತಿದ್ದವು. ಇನ್ನು ಮುಂದೆ ತಾಯಿ ಅಲ್ಲಿಯೇ ಕುಳಿತು ಊಟ ಮಾಡಬೇಕು ಎಂದು ಮಗ ಸೊಸೆ ಆಕೆಗೆ ತಾಕೀತು ಮಾಡಿದರು. ಮುಂದಿನ ದಿನಗಳಲ್ಲಿ ತಾಯಿ ಹಾಗೆಯೇ ಊಟ ಮಾಡುವುದು ರೂಢಿಯಾಯಿತು. ಅವರೆಲ್ಲರೂ ಆಕೆ ಊಟ ಮಾಡುವಾಗ,ಆಹಾರವನ್ನು ತನ್ನ ಬಟ್ಟೆಯ ಮೇಲೆ ಚೆಲ್ಲಿಕೊಂಡಾಗ ಮಾತ್ರ ತುಸು ಅಸಹನೆಯಿಂದ ಮಾತನಾಡುತ್ತಿದ್ದರೇ ಹೊರತು ಸಾಮಾನ್ಯವಾದ ಮಾತು ಕತೆಗೆ ಅವಕಾಶವೇ ಇಲ್ಲದಂತೆ ತಮ್ಮ ಜಗತ್ತಿನಲ್ಲಿ ಮುಳುಗಿ ಹೋಗಿದ್ದರು. ಕುಟುಂಬದವರೆಲ್ಲ ಒಟ್ಟಾಗಿ ಕುಳಿತು ಊಟ ಮಾಡುವ ಸಮಯದಲ್ಲಿ ಕಂಬನಿ ತುಂಬಿದ ಕಣ್ಣುಗಳಿಂದ ತಾಯಿ ಮಗ ಮತ್ತು ಸೊಸೆಯನ್ನು ದಿಟ್ಟಿಸಿ ನೋಡುತ್ತಿದ್ದಳು. ಒಂದೊಮ್ಮೆ ಇಡೀ ಕುಟುಂಬದ ಅಸ್ತಿಭಾರವೇ ತಾನಾಗಿದ್ದರೂ ಕೂಡ ಇದೀಗ ತನ್ನ ಅಸ್ತಿತ್ವವನ್ನೇ ಮರೆತ ಕುಟುಂಬದ ನಡವಳಿಕೆ ಆಕೆಗೆ ನೋವನ್ನು ತರುತ್ತಿತ್ತು. ಆಕೆಯ ಬಾಯಿಂದ ಮಾತುಗಳು ಹೊರಡದಿದ್ದರೂ ಮೌನದಲ್ಲಿಯೇ ಆಕೆ ತನ್ನ ನೋವನ್ನು ಅನಾವರಣಗೊಳಿಸುತ್ತಿದ್ದಳು.

ಅದೊಂದು ದಿನ ಸಾಯಂಕಾಲದ ಹೊತ್ತಿನಲ್ಲಿ ಅವರ ಮೊಮ್ಮಗಳು ಡೈನಿಂಗ್ ಟೇಬಲ್ ಪಕ್ಕದಲ್ಲಿ ನೆಲದ ಮೇಲೆ ಕುಳಿತು ಅಪ್ಪ ತನ್ನ ಹುಟ್ಟು ಹಬ್ಬಕ್ಕೆ ತಂದುಕೊಟ್ಟ ಬಿಲ್ಡಿಂಗ್ ಬ್ಲಾಕ್ ಗಳನ್ನು ಇಟ್ಟುಕೊಂಡು ಆಡುತ್ತಿದ್ದಳು.

ಮಗಳ ಆಟವನ್ನು ನೋಡುತ್ತಿದ್ದ ತಂದೆ ಏನನ್ನು ಮಾಡುತ್ತಿರುವೆ ಮಗು? ಎಂದು ಕೇಳಿದ.

ಆಟದಲ್ಲಿ ಮಗ್ನಳಾಗಿದ್ದ ಬಾಲಕಿ ನಿಧಾನವಾಗಿ ಅಪ್ಪನ ಕಡೆ ಮುಖ ಮಾಡಿ ನಾನು ನಿನಗಾಗಿ ಮತ್ತು ಅಮ್ಮನಿಗಾಗಿ ಪುಟ್ಟ ಮೇಜೊಂದನ್ನು ತಯಾರಿಸುತ್ತಿರುವೆ..ಮುಂದೆ ನಿಮ್ಮಿಬ್ಬರಿಗೂ ವಯಸ್ಸಾದ ನಂತರ ನೀವು ಅದನ್ನು ಬಳಸಲು ಬೇಕಲ್ಲವೇ ? ಎಂದು ಮುಗ್ಧವಾಗಿ ನುಡಿದಳು.

ಇಡೀ ಕೋಣೆಯಲ್ಲಿ ನಿಶ್ಯಬ್ದ ತಾಂಡವವಾಡುತ್ತಿತ್ತು. ಮಾತುಗಳಲ್ಲಿ ಹೇಳಲಾಗದ ಅತ್ಯಂತ ತೀಕ್ಷ್ಣವಾದ ವಿಷಯವನ್ನು ಮೌನದ ವಾತಾವರಣ ಅನಾವರಣಗೊಳಿಸುತ್ತಿತ್ತು.

ಬಾಲಕಿಯ ಅಪ್ಪ ಅಮ್ಮನ ಕಣ್ಣುಗಳಲ್ಲಿ ಕಂಬನಿ ತುಂಬಿ ಇನ್ನೇನು ಹರಿಯಲು ಸಿದ್ಧವಾಗಿದ್ದವು.ಅವರಿಬ್ಬರೂ ಪರಸ್ಪರ ಮುಖ ನೋಡಿಕೊಂಡರು.ಅದೇ ಸಮಯದಲ್ಲಿ ಮುಂದಿನ ದಿನಗಳಲ್ಲಿ ತಮ್ಮ ಮಗಳ ಕಣ್ಣಿನಲ್ಲಿ ತಮ್ಮ ಮುಂದಿನ ಬದುಕಿನ ಪ್ರತಿಬಿಂಬವನ್ನು ಅವರು ಕಂಡುಕೊಂಡರು.

ಮರುದಿನ ಪುಟ್ಟ ಮಗಳು ಶಾಲೆಯಿಂದ ಮನೆಗೆ ಬರುವಷ್ಟರಲ್ಲಿ ಮೂಲೆಯ ಆ ಟೇಬಲ್ ಕಣ್ಮರೆಯಾಗಿತ್ತು. ಇಷ್ಟಗಲ ಕಣ್ಣುಗಳನ್ನು ತೆರೆದು ತನ್ನ ಬೊಚ್ಚು ಬಾಯಿಯನ್ನು ಅಗಲಿಸಿದ ಅಜ್ಜಿ ಅತ್ಯಂತ ನೆಮ್ಮದಿ ಹಾಗೂ ಸಂತೃಪ್ತ ಭಾವದಿಂದ ಮನೆಯ ಎಲ್ಲಾ ಸದಸ್ಯರು ಕುಳಿತುಕೊಳ್ಳುವ ಊಟದ ಮೇಜಿನ ಮೇಲೆ ಕುಳಿತುಕೊಂಡು ಊಟ ಮಾಡಿದಳು.

ಮುಂದಿನ ದಿನಗಳಲ್ಲಿ ಇದೇ ಪದ್ಧತಿ ಮುಂದುವರೆಯಿತು. ಈಗಲೂ ಆಕೆಯ ಕೈಗಳು ನಡುಗುತ್ತಿದ್ದವು. ಆಕೆಯ ಕೈಯಿಂದ ಆಹಾರ ಚೆಲ್ಲುತ್ತಿತ್ತು.... ಆದರೆ ಇದಾವುದನ್ನೂ ಮನೆಯ ಸದಸ್ಯರು ವಿಪರೀತವಾಗಿ ಯೋಚಿಸಲಿಲ್ಲ, ಪರಿಗಣಿಸಲಿಲ್ಲ... ಅಸಹನೆಯಿಂದ ಕೂಗಾಡಲಿಲ್ಲ. ಇದೊಂದು ವಯೋಸಹಜವಾದ ಸಾಮಾನ್ಯ ಪ್ರಕ್ರಿಯೆ ಎಂಬಂತೆ ನಡೆದುಕೊಳ್ಳಲು ಆರಂಭಿಸಿದರು.ಮಗ ತಾನು ಆಫೀಸಿಗೆ ಹೋಗುವಾಗ ಹಾಗೂ ಆಫೀಸಿನಿಂದ ಬಂದ ಬಳಿಕ ರಾತ್ರಿ ಮಲಗುವ ಮುನ್ನ ತಾಯಿಗೆ ಕೇಳಲಿ ಬಿಡಲಿ ಒಂದಷ್ಟು ಹೊತ್ತು ಆಕೆಯ ಬಳಿ ಕುಳಿತು ಮಾತನಾಡತೊಡಗಿದ. ಸೊಸೆ ಕೂಡ ಅತ್ತೆಗೆ ಅನುಕೂಲವಾಗುವ ರೀತಿಯಲ್ಲಿ ನಡೆದುಕೊಳ್ಳಲು ಆರಂಭಿಸಿದಳು. ನಿಧಾನವಾಗಿ ಅಜ್ಜಿಯ ಆರೋಗ್ಯ ಕೂಡ ಸುಧಾರಿಸತೊಡಗಿತು.... ಇದು ಔಷಧಿ ಮತ್ತು ಮಾತ್ರೆಗಳ ಚಮತ್ಕಾರವಲ್ಲ... ಬದಲಾಗಿ ಕುಟುಂಬದ ಸದಸ್ಯರ ಪ್ರೀತಿಪೂರ್ವಕ



ನಡವಳಿಕೆ ಹಾಗೂ ಕಾಳಜಿಗಳು ಆಕೆಗೆ ಔಷಧಿಯಾಗಿ ಪರಿಣಮಿಸಿದವು.

ಪುಟ್ಟ ಬಾಲಕಿ ತನಗರಿವಿಲ್ಲದೆ ಹಿರಿಯರನ್ನು ಗೌರವಿಸಬೇಕು ಎಂಬ ಸಹಾನುಭೂತಿಯ ಅತಿ ದೊಡ್ಡ ಪಾಠವನ್ನು ತನ್ನ ಪಾಲಕರಿಗೆ ಕಲಿಸಿದ್ದಳು

ಈ ಕಥೆಯನ್ನು ಓದಿದಾಗ ನಾವು ಪ್ರಾಥಮಿಕ ಶಾಲೆಯಲ್ಲಿ ಓದುತ್ತಿರುವಾಗ ವಯಸ್ಸಾದ ತನ್ನ ಅಜ್ಜನಿಗೆ ತಂದೆ ತಾಯಿ ಮಣ್ಣಿನ ತಟ್ಟೆಯಲ್ಲಿ ಊಟ ಕೊಡುವುದನ್ನು ನೋಡಿದ ಪುಟ್ಟ ಬಾಲಕ ಒಂದು ದಿನ ತನ್ನ ತಂದೆ ತಾಯಿಗಾಗಿ ಮಣ್ಣಿನ ತಟ್ಟೆಗಳನ್ನು ಜೋಪಾನವಾಗಿ ಎತ್ತಿಟ್ಟು ತೋರುವ ಮೂಲಕ ತನ್ನ ಪಾಲಕರಿಗೆ ಪಾಠ ಕಲಿಸಿದ ಕಥೆ ನಮಗೆ ನೆನಪಿಗೆ ಬರುತ್ತದೆ ಅಲ್ಲವೇ ಸ್ನೇಹಿತರೆ?

ಇಂಗ್ಲಿಷಿನಲ್ಲಿ ಗಾದೆಯೊಂದಿಗೆ ಹಳೆಯ ಮಡಕೆಯಲ್ಲಿ ಹೊಸ ನೀರು ಎಂದು.... ಇದು ಹಾಗೆಯೇ ಎಂದು ಮೂಗು ಮುರಿಯುವುದು ಬೇಡ. ಬದುಕಿನ ರೀತಿ ನೀತಿಗಳು ಬದಲಾದರೂ ಬದುಕು ಮಾತ್ರ ಅದೇ. ಪಾತ್ರೆಗಳು ಹಾಗೂ ಪಾತ್ರಗಳು ಬದಲಾಗಬಹುದು ಅಂತೆಯೇ ನಾವುಗಳು ಕೂಡಾ. ಬದುಕುತ್ತಿರುವವರು. ನಾವು ಹೊಸ ಜನರಾದರೂ ಬದುಕು ಅತ್ಯಂತ ಪುರಾತನವಾದದ್ದು. ಅದೆಷ್ಟೇ ಆವಿಷ್ಕಾರಗಳು ಬರಲಿ , ಅದೆಷ್ಟೇ ಬದುಕು ಬದಲಾಗಲಿ , ಅದೆಷ್ಟೇ ಆಧುನಿಕ ಚಿಂತನೆಗಳು ನಮ್ಮದಾಗಲಿ..ಆದರೆ ನಮ್ಮ ಬದುಕಿನಲ್ಲಿ ಮೌಲ್ಯಗಳು ಎಂದಿಗೂ ತಮ್ಮ ಸ್ಥಾನವನ್ನು ಬಿಟ್ಟು ಕೊಡಬಾರದು. ಪ್ರೀತಿ, ಪ್ರೇಮ, ಕರುಣೆ, ದಯೆ, ಸಹಾನುಭೂತಿ,ಅನುಕಂಪಗಳಂತಹ ಮಾನವೀಯ ಮೌಲ್ಯಗಳು ಹಿಂದಿನಿಂದಲೂ ಇದ್ದವು... ಈಗಲೂ ಇವೆ ಮುಂದೆಯೂ ಇರುತ್ತವೆ . ಅವುಗಳು ನಮಗೆ ಕಲಿಸುವ ಪಾಠಗಳು ಚಿರನೂತನ. ಜಗತ್ತಿನ ಮತ್ತಾವುದೇ ಸುಖ ಸೌಲಭ್ಯಗಳು ಐಶಾರಾಮಿ ವಸ್ತುಗಳು ಈ ಮೌಲ್ಯಗಳನ್ನು ರಿಪ್ಲೇಸ್ ಮಾಡಲು ಸಾಧ್ಯವಿಲ್ಲ. ಮೌಲ್ಯಗಳು.... ಎಸ್! ದೇ ಆರ್ ಅಬ್ಸಲ್ಯೂಟ್ಲಿ ಇರ್ರಿಪ್ಲೇಸೇಬಲ್.

ಬದುಕಿನ ಕೆಲವು ಪಾಠಗಳನ್ನು ತಮ್ಮ ಪಾಲಕರಿಂದ ಮಕ್ಕಳು ಕಲಿತರೆ ಮತ್ತೆ ಕೆಲವು ಪಾಠಗಳನ್ನು ಮಕ್ಕಳಿಂದ ಬಾಲಕರು ಕಲಿಯುತ್ತಾರೆ. ಇಲ್ಲಿ ಯಾರು ಯಾರಿಗೆ ಬೇಕಾದರೂ ಗುರುವಾಗಬಹುದು ಶಿಷ್ಯರಾಗಬಹುದು... ಬದುಕಿನ ಪಾಠಗಳನ್ನು ಕಲಿಯಬಹುದು.

ಬದುಕೇ ಒಂದು ಪಾಠಶಾಲೆ.ನಮ್ಮ ಬದುಕಿನಲ್ಲಿ ಬಂದು ಹೋಗುವ ನೂರಾರು ಜನರು ನಮಗೆ ಶಿಕ್ಷಕರಾಗಿ ಪಾಠವನ್ನು ಕಲಿಸಬಹುದು. ಬದುಕಿನ ಪಾಠಶಾಲೆಯಲ್ಲಿ ನಾವು ಸದಾ ವಿದ್ಯಾರ್ಥಿಗಳಾಗಿ ಬದುಕು ನಮಗೆ ನೀಡುವ ಸವಾಲುಗಳು, ಏಳು ಬೀಳುಗಳು, ನೋವು ನಲಿವುಗಳು ಆಕಸ್ಮಿಕ ತಿರುವುಗಳು ಆಘಾತಗಳು, ಚಿತ್ರವಿಚಿತ್ರ ಸನ್ನಿವೇಶಗಳ ಸಮಯಗಳಲ್ಲಿ ನಮ್ಮ ಬದ್ಧತೆ ಹಾಗೂ ಸ್ಪಷ್ಟ ನಿಲುವನ್ನು ಉಳಿಸಿಕೊಳ್ಳಲು ಕಾರಣವಾಗುವ ಮೌಲ್ಯಗಳು ನಮ್ಮೊಂದಿಗೆ ಸದಾ ಇರಲೇಬೇಕು.

ಅದುವೇ ಉತ್ತಮ ಬದುಕಿಗೆ ಅಸ್ತಿಭಾರ ಏನಂತೀರಾ ಸ್ನೇಹಿತರೆ?

**ವೀಣಾ ಹೇಮಂತ್ ಗೌಡ ಪಾಟೀಲ್ ಮುಂಡರಗಿ ಗದಗ್**

# ಬಾಕಿ ಹಣಕ್ಕೆ ಆಗ್ರಹಿಸಿ ಮಾ.5 ಗುತ್ತಿಗೆದಾರರ ಸಂಘದ ಮುಷ್ಕರ

**ದಾವಣಗೆರೆ, ಫೆ. 18–** ರಾಜ್ಯ ಸರ್ಕಾರದಿಂದ ಗುತ್ತಿಗೆದಾರರಿಗೆ ಬಾಕಿ ಉಳಿದಿರುವ ಹಣ ಸುಮಾರು 37ಸಾವಿರ ಕೋಟಿ ರೂ.ಗಳ ವರೆಗೆ ತಕ್ಷಣ ಬಿಡುಗಡೆ ಮಾಡುವಂತೆ ಒತ್ತಾಯಿಸಿ, ಮಾರ್ಚ್ 5ರಂದು ಬೆಂಗಳೂರಿನಲ್ಲಿ ಬೃಹತ್ ಮುಷ್ಕರ ನಡೆಸುವುದಾಗಿ ಕರ್ನಾಟಕ ರಾಜ್ಯ ಗುತ್ತಿಗೆದಾರರ ಸಂಘದ ರಾಜ್ಯ ಅಧ್ಯಕ್ಷ ಆರ್.ಮಂಜುನಾಥ್ ಎಚ್ಚರಿಕೆ ನೀಡಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಒಂದು ವೇಳೆ ಬಾಕಿ ಪಾವತಿ ಆಗದಿದ್ದರೆ ರಾಜ್ಯಾದ್ಯಂತ ಕಾಮಗಾರಿ ಸ್ಥಗಿತಗೊಳಿಸಿ ಹೋರಾಟ ನಡೆಸಲಾಗುವುದು. ಕರ್ನಾಟಕ ರಾಜ್ಯ ಗುತ್ತಿಗೆದಾರರ ಸಂಘವು ಮುಖ್ಯಮಂತ್ರಿಯವರಿಗೆ, ಸಚಿವರನ್ನು ಹಾಗೂ ಇಲಾಖೆಯ ಸರ್ಕಾರದ ಕಾರ್ಯದರ್ಶಿಯವರನ್ನು ಹಲವಾರು ಸಾರಿ ಬೇಟಿ ಮಾಡಿ ಚರ್ಚಿಸಿದರೂ ಸಹ ಏನೂ ಪ್ರಯೋಜನವಾಗಿರುವುದಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಗುತ್ತಿಗೆದಾರರ ಸಮಸ್ಯೆಗಳಿಗೆ ಹಲವಾರು ಸಾರಿ ಪತ್ರ ಬರೆದರು ಮಾನ್ಯ ಲೋಕೋಪಯೋಗಿ ಸಚಿವರು, ಮಾನ್ಯ ಉಪ ಮುಖ್ಯಮಂತ್ರಿಗಳು ಸಭೆ ಕರೆದು ಭರವಸೆ ನೀಡುತ್ತಾ ಬಂದಿರುತ್ತಾರೆ. ಮತ್ತು ಹಲವಾರು ಸಚಿವರುಗಳು ಮಾತ್ರ ನಮ್ಮ ಪತ್ರಕ್ಕೆ ಸ್ಪಂದಿಸಿ, ಸಭೆ ನಡೆಸಿ, ಸಮಸ್ಯೆಗಳ ಬಗ್ಗೆ ಚರ್ಚಿಸಿರುತ್ತಾರೆ. ಆದರೆ ಯಾವುದೇ ಪ್ರಯೋಜನವಾಗಿಲ್ಲ.

ರಾಜ್ಯ ಗುತ್ತಿಗೆದಾರರ ಸಂಘದ ಪದಾಧಿಕಾರಿಗಳು ಈಗಾಗಲೇ ಜನವರಿಯಲ್ಲಿ ಪ್ರತಿಕಾಗೋಷ್ಠಿ ನಡೆಸಿ, ಗುತ್ತಿಗೆದಾರರ ಬಿಲ್ಲುಗಳ ಬಾಕಿ ಹಣವನ್ನು ತಕ್ಷಣ ಬಿಡುಗಡೆ ಮಾಡಬೇಕೆಂದು, ಜೇಷ್ಠತೆಯನ್ನು ಕಾಪಾಡಬೇಕೆಂದು, ಆದ್ಯತೆ ಮೇರೆಗೆ ಒಂದೆ




ಕಂತಿನಲ್ಲಿ ಹಣ ಬಿಡುಗಡೆ ಮಾಡಬೇಕೆಂದು ಒತ್ತಾಯಿಸಲಾಗಿದೆ. ಇಲ್ಲದೆ ಇದ್ದರೆ ರಾಜ್ಯಾದ್ಯಂತ ಚಾಲ್ತಿಯಲ್ಲಿ ಇರುವ ಕಾಮಗಾರಿಗಳನ್ನು ಸ್ಥಗಿತಗೊಳಿಸಲಾಗುವುದೆಂದು ಘೋಷಿಸಲಾಗಿತ್ತು. ಆದರೂ ಸರ್ಕಾರ ಯಾವುದೇ ಕ್ರಮ ಕೈಗೊಳ್ಳಲು ಮುಂದಾಗುತ್ತಿಲ್ಲ ಎಂದು ಕಿಡಿಕಾರಿದರು.

ಇದಲ್ಲದೇ ಮುಖ್ಯಮಂತ್ರಿಗಳಿಗೆ, ಸಚಿವರುಗಳಿಗೆ, ಸರ್ಕಾರದ ಮುಖ್ಯ ಕಾರ್ಯದರ್ಶಿಗಳಿಗೆ ಪತ್ರವನ್ನು ಬರೆದಿದ್ದು ಇದರ ಬಗ್ಗೆ 2026-27ನೇ ಸಾಲಿನ ಆಯವ್ಯಯದಲ್ಲಿ ಹಣ ಬಿಡುಗಡೆ ಬಗ್ಗೆ ಅವಕಾಶ ಕಲ್ಪಿಸಲು ಕೋರಲಾಗಿತ್ತು ಎಂದ ಅವರು ಹಾಲಿ ಸರ್ಕಾರದಲ್ಲಿ ಹಿಂದಿನ ಸರ್ಕಾರಕ್ಕಿಂತ ಹೆಚ್ಚು ಭ್ರಷ್ಟಾಚಾರ, ಕಮಿಷನ್ ಹೆಚ್ಚಾಗಿದೆ. ಗುತ್ತಿಗೆದಾರರು ಸಾಲ ಪಡೆದು ಮನೆಗಳನ್ನು ಕಟ್ಟಿಸಿ ಕಷ್ಟದಲ್ಲಿದ್ದಾರೆ ಎಂದು ಹೇಳಿದರು.

ಸುಮಾರು ಎರಡುವರೆ ವರ್ಷಗಳಿಂದ ಮುಖ್ಯಮಂತ್ರಿಗಳು, ಕರ್ನಾಟಕ ರಾಜ್ಯ ಗುತ್ತಿಗೆದಾರರ ಸಂಘದ ಪದಾಧಿಕಾರಿಗಳು, ಸಚಿವರು ಹಾಗೂ ಸರ್ಕಾರದ ಕಾರ್ಯದರ್ಶಿಗಳ ಜೊತೆಗೆ ಇದುವರೆವಿಗೂ, ಅದಿಕೃತವಾದ ಸಭೆಯನ್ನು ನಡೆಸಿರುವುದಿಲ್ಲ. 2-3 ಸಭೆಗಳನ್ನು ನಿಗದಿಪಡಿಸಿ, ಯಾವುದೇ ನಿರ್ದಿಷ್ಟ ಕಾರಣಗಳನ್ನು ನೀಡದೇ ಅನಿರ್ದಿಷ್ಟ ಅವದಿಗೆ ಮುಂದೂಡಿರುತ್ತಾರೆ ಎಂದು ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಲಕ್ಷ್ಮೀಪತಿ, ಸುಬ್ರಹ್ಮಣ್ಯ ದೇವನಹಳ್ಳಿ, ಜಿ.ಅರ್.ಜಗದೀಶ್, ಕೆ.ಎಸ್.ನಾಗರಾಜ್, ಹೇಮಂತ್, ದೇವರಾಜ್ ಇತರರು ಇದ್ದರು.

# ದೇವದಾಸಿಯರ ಪುನರ್ ಸರ್ವೆಗೆ ಆಗ್ರಹ

**ಬಳ್ಳಾರಿ, ಫೆ.18:** ಎಲ್ಲ ದೇವದಾಸಿ ಮಹಿಳೆಯರನ್ನು ಸರ್ವೆಗೆ ಒಳಪಡಿಸಬೇಕೆಂದು ಕರ್ನಾಟಕ ರಾಜ್ಯ ದೇವದಾಸಿ ಮಹಿಳೆಯರ ವಿಮೋಚನಾ ಸಂಘ ರಾಜ್ಯ ಸರ್ಕಾರವನ್ನು ಒತ್ತಾಯಿಸಿದೆ.

ಈ ಕುರಿತು ಇಂದು ನಗರದ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿ ನಡೆಸಿದ ಸಂಘದ ಗೌರವ ಅಧ್ಯಕ್ಷ ಯು ಬಸವರಾಜ. ಕರ್ನಾಟಕ ಸರ್ಕಾರ ಇತ್ತೀಚಿಗೆ ಮಾಜಿ ದೇವದಾಸಿ ಮಹಿಳೆಯರು ಮತ್ತು ಅವರ ಮೂರು ತಲೆಮಾರಿನ ಕುಟುಂಬಗಳ ಸದಸ್ಯರ ಗಣತಿ ಕಾರ್ಯವನ್ನು ಕೈಗೊಂಡಿದೆ ಅದು ಅಪೂರ್ಣವಾಗಿದೆ, ಸಮಗ್ರವಾಗಿಲ್ಲ. 2007-08 ರ ಗಣತಿಯೇ ಅಸಮರ್ಪಕವಾಗಿತ್ತು 1982 ರಲ್ಲಿ ಅಥವಾ ನಂತರ ಅವರು ದೇವದಾಸಿ ಮಹಿಳೆಯರಾಗಿದ್ದಾರೆ ಅವರನ್ನ ಆ ಗಣತಿ ಪರಿಗಣಿಸಿರಲಿಲ್ಲ. ಆದ್ದರಿಂದ ಮರುಗಣತಿ ಮಾಡುವಂತೆ ಒತ್ತಾಯ ಮಾಡಿತ್ತು. ಈಗ ಪುನಃ ಮತ್ತೆ ಮರು ಸಮೀಕ್ಷೆ ಹೆಸರಿನಲ್ಲಿ 2025 ರಲ್ಲಿ ಸರ್ಕಾರ ಗಣತಿ ಮಾಡಿತು. ಇದು ಸಹ ಪರಿಪೂರ್ಣವಾಗಿಲ್ಲ.. ಈ ಸಮೀಕ್ಷೆಯಲ್ಲಿ 23,385 ಜನರನ್ನು ಮಾತ್ರ ಗುರುತಿಸಿದೆ.

ಆದರೂ ಕೂಡ ಈ ಸಮೀಕ್ಷೆಯನ್ನು ತಿರಸ್ಕಾರ ಮಾಡ್ತಾ ಇಲ್ಲ.

ಸಮೀಕ್ಷೆಯಿಂದ ಹೊರಗೆ ಉಳಿದಂತ ಮಹಿಳೆಯರ ಎರಡು ಮೂರು




ತಲೆಮಾರಿನ ಕುಟುಂಬಗಳನ್ನು ಒಳಗೊಳ್ಳುವುದಕ್ಕೆ ಈ ಸಮೀಕ್ಷೆಯನ್ನು ಮುಂದುವರಿಸಬೇಕು ಎಂದಿದ್ದಾರೆ.ಮಕ್ಕಳು ಮೊಮ್ಮಕ್ಕಳನ್ನು ಕೂಡ ಗಣತಿಯಲ್ಲಿ ಸೇರಿಸಿಕೊಳ್ಳುವುದಕ್ಕೆ 108 ದಾಖಲಾತಿಗಳನ್ನ ಕೇಳುವ ಮೂಲಕ ಅವರು ಗಣತಿಗೆ ಬರದ ರೀತಿಯಲ್ಲಿ ತಡೆಯಲಾಗಿದೆ.ಅದೇ ರೀತಿಯಲ್ಲಿ 82 ರ ನಂತರ ದೇವದಾಸಿಯರಾದಂತವರನ್ನು ಕೂಡ ಈ ಸರ್ವೆಯಲ್ಲಿ ಸೇರಿಸದೆ ಹೊರಗಿಡಲಾಗಿದೆ. ಅದಕ್ಕಾಗಿ ಪನರ್ ಸರ್ವೆ ಆಗಬೇಕು ಎಂದಿದ್ದಾರೆ.ಸುದ್ದಿಗೋಷ್ಠಿಯಲ್ಲಿ ಸಂಘದ ಪ್ರಧಾನ ಕಾರ್ಯದರ್ಶಿ ಬಿ ಮಾಳಮ್ಮ ಜಿಲ್ಲಾ ಕಾರ್ಯದರ್ಶಿ ಎ ಸ್ವಾಮಿ, ಜಿಲ್ಲಾ ಅಧ್ಯಕ್ಷೆ ಈರಮ್ಮ ಕುರುಗೋಡು ತಾಲೂಕು ಕಾರ್ಯದರ್ಶಿ, ಸಿ ವೀರೇಶ್ ಮೊದಲಾದವರು ಇದ್ದರು

# ನಗರದ ಸುರಕ್ಷತೆಗಾಗಿ ತಪ್ಪದೆ ಮತದಾನ ಮಾಡಿ; ಶಾಸಕ ಯತ್ನಾಳ ಸಲಹೆ



**ವಿಜಯಪುರ, ಫೆ. 18:** ನಗರಕ್ಕೆ 3ನೇ ಹಂತದ ಕುಡಿಯುವ ನೀರಿನ ಯೋಜನೆ ಅನುಷ್ಠಾನಕ್ಕಾಗಿ ಬರುವ ಅಧಿವೇಶನದಲ್ಲಿ ಧ್ವನಿ ಎತ್ತುವುದಾಗಿ ನಗರ ಶಾಸಕ ಬಸನಗೌಡ ಪಾಟೀಲ ಯತ್ನಾಳ ಅವರು ಭರವಸೆ ನೀಡಿದರು.

ವಿಜಯಪುರ ನಗರದಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗೆ ಭೂಮಿಪೂಜೆ ನೆರವೇರಿಸಿ ಮಾತನಾಡಿದ ಅವರು, ಮಹಾನಗರ ಪಾಲಿಕೆ ವ್ಯಾಪ್ತಿ ವಿಸ್ತರಣೆಗೊಂಡಿದ್ದು, ಎಲ್ಲ ಭಾಗಕ್ಕೂ ನಿರಂತರ ಮತ್ತು ಸಮರ್ಪಕವಾಗಿ ನೀರು ಒದಗಿಸಲು 3ನೇ ಹಂತದ ಯೋಜನೆ ಅನುಷ್ಠಾನ ಅಗತ್ಯವಿದೆ ಎಂದರು.

ಶುದ್ಧ ಗಾಳಿ, ಅಭಿವೃದ್ಧಿ, ಗಟ್ಟಿತನ ಹೀಗೆ ಎಲ್ಲದರಲ್ಲೂ ವಿಜಯಪುರ ನಗರ ದೇಶದಲ್ಲಿ ಹೆಸರುವಾಸಿ ಆಗಿದೆ. ಮಾದರಿ ನಗರವಾಗಿ ರೂಪುಗೊಂಡಿರುವ ಮತಕ್ಷೇತ್ರವನ್ನು ಹೇಗಾದರೂ ಮಾಡಿ ವಶಪಡಿಸಿಕೊಳ್ಳಬೇಕೆಂದು ಸಾಬರು ನಿರ್ಧರಿಸಿದ್ದಾರೆ. ಖೊಟ್ಟಿ ಮತದಾನ ಮಾಡಿಸಿದ್ದಾರೆ ಅಂತ ಸುಳ್ಳು ಕೇಸ್ ದಾಖಲಿಸಿ ಎರಡ್ಮೂರು ಬಾರಿ ನ್ಯಾಯಾಲಯದಲ್ಲಿ ಛೀಮಾರಿ ಹಾಕಿಸಿಕೊಂಡು, ದಂಡ ಕಟ್ಟಿದ್ದಾರೆ ಎಂದರು.

ನಗರದ ಸುರಕ್ಷತೆಗಾಗಿ ಮತದಾರರು ಜಾಗೃತವಾಗಿ ಆಲಸ್ಯತನ ಮಾಡದೇ ತಪ್ಪದೆ ಎಲ್ಲರೂ ಮತದಾನ ಮಾಡಬೇಕು. ಒಮ್ಮೆ ಕಳೆದುಕೊಂಡರೆ ನಗರದ ಅಭಿವೃದ್ಧಿಯ ವಾತಾವರಣ ಮತ್ತೆ 20 ವರ್ಷ ಹಿಂದಕ್ಕೆ ಹೋಗುತ್ತದೆ ಎಂದರು.

ಧೂಳಾಪುರವಾಗಿದ್ದ ವಿಜಯಪುರ ನಗರದಲ್ಲಿ ನಿರೀಕ್ಷೆ ಮೀರಿ ಅಭಿವೃದ್ಧಿ ಕಾರ್ಯಗಳನ್ನು ಮಾಡಿದ್ದರಿಂದ ಮಾದರಿ ನಗರವಾಗಿ ನಿರ್ಮಾಣಗೊಂಡಿದೆ. ಇಂದು ಕೂಡ ರೂ.325 ಲಕ್ಷ ಮೊತ್ತದಲ್ಲಿ ವಾರ್ಡ್ ನಂ.22 ರಲ್ಲಿ ಬರುವ ನಗರಾಭಿವೃದ್ಧಿ ಪ್ರಾಧಿಕಾರ ಕಚೇರಿಯಿಂದ ದೇವರಾಜ ಅರಸು ವೃತ್ತದ ವರೆಗೆ (ಜಲನಗರ ಮುಖ್ಯರಸ್ತೆ) ಸಿಸಿ ರಸ್ತೆ ಅಭಿವೃದ್ಧಿ, ರೂ.20 ಲಕ್ಷ ಮೊತ್ತದಲ್ಲಿ ರಾಷ್ಟ್ರವೀರ ಶ್ರೀ ವೀರಮಹಾರಾಣಾ ಪ್ರತಾಪಸಿಂಹಜಿ ವೃತ್ತದ ಸುತ್ತಲೂ ಆವರಣ ಗೋಡೆ, ಕೋಬಲ್ ಪೆವಿಂಗ್ ಅಭಿವೃದ್ಧಿಗೆ ಭೂಮಿಪೂಜೆ ನೆರವೇರಿಸಲಾಗಿದೆ.

ಅದೇ ರೀತಿ ರೂ.150 ಲಕ್ಷ ಮೊತ್ತದಲ್ಲಿ ವಾರ್ಡ್ ನಂ.21ರಲ್ಲಿ ಬರುವ ಸದಾಶಿವ ನಗರ ಮುಖ್ಯ ರಸ್ತೆಯಿಂದ ಈಶ್ವರ ದೇವಸ್ಥಾನದ ಮೂಲಕ ಏಳು ಮಕ್ಕಳ ತಾಯಿ ಗುಡಿ ವರೆಗಿನ ಪ್ರಮುಖ ಸಿಸಿ ರಸ್ತೆ ಹಾಗೂ ರೇಣುಕಾ ನಗರ ಆಂತರಿಕ ಸಿಸಿ ರಸ್ತೆ ನಿರ್ಮಾಣ, ರೂ.150 ಲಕ್ಷ ಮೊತ್ತದಲ್ಲಿ ಗುರುದೇವ ನಗರ ಪಶ್ಚಿಮ ಭಾಗ ಹಾಗೂ ಗುರುದೇವ ನಗರ ಪೂರ್ವ ಭಾಗದ ಆಂತರಿಕ ರಸ್ತೆಗಳ ಡಾಂಬರಿಕರಣ ಕಾಮಗಾರಿ, ರೂ.200 ಲಕ್ಷ ಮೊತ್ತದಲ್ಲಿ ಸಾಯಿಪಾರ್ಕ್ ಮುಖ ರಸ್ತೆಯಿಂದ ಗುರುದೇವ ನಗರದ ಮೂಲಕ ಕೊಲ್ಹಾರ ರಸ್ತೆ ಕೂಡುವ ರಸ್ಥೆ ಅಭಿವೃದ್ಧಿಪಡಿಸುವ ಕಾಮಗಾರಿಗೆ ಭೂಮಿಪೂಜೆ ನೆರವೇರಿಸಲಾಗಿದೆ ಎಂದು ತಿಳಿಸಿದರು.

ಮಹಾನಗರ ಪಾಲಿಕೆ ಮೇಯರ್ ಎಂ.ಎಸ್.ಕರಡಿ, ಸದಸ್ಯರಾದ ಪ್ರೇಮಾನಂದ ಬಿರಾದಾರ, ಕುಮಾರ ಗಡಗಿ, ಗಿರೀಶ ಬಿರಾದಾರ, ಮುಖಂಡರಾದ ಶಂಕರ ಹೂಗಾರ, ಚಂದ್ರಶೇಖರ ಚೌದರಿ, ಮಡಿವಾಳ ಯಾಳವಾರ, ಸಂತೋಷ ತಲಕೇರಿ, ರಾಜಶೇಖರ ಭಜಂತ್ರಿ ಸೇರಿದಂತೆ ಮುಖಂಡರು, ಹಿತೈಷಿಗಳು, ಕಾರ್ಯಕರ್ತರು, ಅಭಿಮಾನಿಗಳು ಹಾಗೂ ಸ್ಥಳೀಯ ನಾಗರಿಕರು ಉಪಸ್ಥಿತರಿದ್ದರು.

# ಕನ್ನಡ ಸಾಹಿತ್ಯ ಅಂತರಾಷ್ಟ್ರೀಯ ಮಟ್ಟಕ್ಕೆ ಬೆಳೆಯಲಿ:ಡಾ. ದಾಕ್ಷಾಯಣಿ ಎಸ್. ಅಪ್ಪ



**ಕಲಬುರಗಿ, ಫೆ.18–** ಕನ್ನಡ ಭಾಷೆ ಮತ್ತು ಸಾಹಿತ್ಯವು ಕೇವಲ ಕರುನಾಡು, ಭಾರತಕ್ಕೆ ಸೀಮಿತವಾಗದೆ ಆಧುನಿಕ ತಂತ್ರಜ್ಞಾನವನ್ನು ಬಳಸಿಕೊಂಡು ಅಂತರಾಷ್ಟ್ರೀಯ ಮಟ್ಟಕ್ಕೇ ತಲುಪುವಂತಾಗಬೇಕು ಎಂದು ಶರಣಬಸವೇಶ್ವರ ವಿದ್ಯಾವರ್ಧಕ ಸಂಘದ ಅಧ್ಯಕ್ಷೆ ಡಾ. ದಾಕ್ಷಾಯಣಿ ಎಸ್. ಅಪ್ಪ ಅವರು ಆಶಯ ವ್ಯಕ್ತಪಡಿಸಿದರು.
ಮಂಗಳವಾರ ನಗರದ ಕನ್ನಡ ಭವನದ ಆವರಣದ ಬಾಪೂಗೌಡ ದರ್ಶನಾಪುರ ರಂಗಮಂದಿರದಲ್ಲಿ ನಡೆಯುತ್ತಿರುವ ಕಲಬುರಗಿ ಜಿಲ್ಲಾ 22ನೇ ಕನ್ನಡ ಸಾಹಿತ್ಯ ಸಮ್ಮೇಳನದ ಎರಡನೇ ದಿನವಾದ ಮಂಗಳವಾರ "ಸಮ್ಮೇಳನಾಧ್ಯಕ್ಷರ ಬದುಕು-ಬರಹ" ವಿಶೇಷ ಉಪನ್ಯಾಸದಲ್ಲಿ ಭಾಗಿಯಾಗಿ ಮಾತನಾಡಿದರು.
ಕನ್ನಡ ಸಾಹಿತ್ಯವನ್ನು ಜಗತ್ತಿನಾದ್ಯಂತ ಪಸರಿಸಲು ತಾಂತ್ರಿಕತೆಯನ್ನು ಅಳವಡಿಸಿಕೊಳ್ಳುವುದು ಇಂದಿನ ತುರ್ತು ಅಗತ್ಯವಾಗಿದೆ. ವೈದ್ಯರು, ಇಂಜಿನಿಯರ್‌ಗಳು ಹಾಗೂ ಪ್ರತಿಯೊಬ್ಬ ವಿದ್ಯಾವಂತ ಕನ್ನಡಿಗರು ತಮ್ಮ ವೃತ್ತಿಯ ಜೊತೆಗೆ ಕನ್ನಡ ಸಾಹಿತ್ಯವನ್ನು ಸಂಗ್ರಹಿಸಿ, ಅದನ್ನು ವಿಶ್ವಮಟ್ಟಕ್ಕೆ ಕೊಂಡೊಯ್ಯಲು ಶ್ರಮಿಸಬೇಕು ಎಂದು ಹೇಳಿದರು.
ಹಳೆಯ ಬೇರು, ಹೊಸ ಚಿಗುರು ಎನ್ನುವಂತೆ ಹಿರಿಯ ಸಾಹಿತಿಗಳ ಅನುಭವದೊಂದಿಗೆ ಯುವಕರನ್ನು ಪ್ರೋತ್ಸಾಹಿಸಿ ಕನ್ನಡವನ್ನು ಬೆಳೆಸಬೇಕಿದೆ. ಶರಣರ ಸಾಹಿತ್ಯ ಮಾರ್ಗ ನಮಗೆ ಎಂದಿಗೂ ಆದರ್ಶವಾಗಿದೆ ಎಂದು ತಿಳಿಸಿದರು.
ಪೂಜ್ಯ ಶರಣಬಸಪ್ಪ ಅಪ್ಪ ಮತ್ತು ದೊಡ್ಡಪ್ಪ ಅಪ್ಪ ಅವರು ಕನ್ನಡದ ಮೇಲೆ ಇಟ್ಟಿದ್ದ ಅಪಾರ ಪ್ರೀತಿ ಹಾಗೂ ಕನ್ನಡ ನಾಡು ಕಟ್ಟುವಲ್ಲಿ ಅವರು ನೀಡಿದ ಕೊಡುಗೆಯನ್ನು ಈ ಸಂದರ್ಭದಲ್ಲಿ ಸ್ಮರಿಸಿದ ಅವರು, ಕಲಬುರಗಿ ಜಿಲ್ಲೆಯು ಕನ್ನಡ ಸಾಹಿತ್ಯಕ್ಕೆ ತಾಯಿ ಮನೆಯಂತಿದೆ. ಇಲ್ಲಿನ ಸಿರಿವಂತಿಕೆಯ ಸಾಹಿತ್ಯಿಕ ಪರಂಪರೆ ನಿರಂತರವಾಗಿ ಮುಂದುವರಿಯಲಿ ಎಂದು ಹಾರೈಸಿದರು.
ಕನ್ನಡ ಸಾಹಿತ್ಯ ಪರಿಷತ್ತಿನ ಚಟುವಟಿಕೆಗಳು ಕೇವಲ ಚರ್ಚೆಗೆ ಸೀಮಿತವಾಗದೆ ಕ್ರಿಯಾತ್ಮಕವಾಗಿರಬೇಕು. ರೈತರು, ಕಾರ್ಮಿಕರು, ನಿರ್ಗತಿಕರು ಮತ್ತು ವಿದ್ಯಾರ್ಥಿಗಳ ಸಮಸ್ಯೆಗಳಿಗೆ ಸ್ಪಂದಿಸುವ ನಿಟ್ಟಿನಲ್ಲಿ ಸಾಹಿತ್ಯ ಪರಿಷತ್ತು ಕೆಲಸ ಮಾಡಬೇಕು ಎಂದು ಡಾ.ದಾಕ್ಷಾಯಿಣಿ ಎಸ್. ಅಪ್ಪ ಅವರು ಸಲಹೆ ನೀಡಿದರು.
ಕಲಬುರಗಿ ಗ್ರಾಮೀಣ ಶಾಸಕ ಬಸವರಾಜ ಮತ್ತಿಮೂಡ್ ಅವರು ಮಾತನಾಡಿ, ಕಲಬುರಗಿಯನ್ನು ರಾಜ್ಯದ ಉಪರಾಜಧಾನಿಯನ್ನಾಗಿ ಮಾಡುವಂತೆ ಸಮ್ಮೇಳನಾಧ್ಯಕ್ಷ ಮುಡಬಿ ಗುಂಡೇರಾವ ಅವರು ತಮ್ಮ ಅಧ್ಯಕ್ಷೀಯ ನುಡಿಯಲ್ಲಿ ಪ್ರಸ್ತಾಪಿಸಿದ್ದು, ಅದಕ್ಕೆ ತಮ್ಮ ಸಂಪೂರ್ಣ ಬೆಂಬಲವಿದೆ. ಈ ಭಾಗದ ಅಭಿವೃದ್ಧಿ ಮತ್ತು ಆಡಳಿತಾತ್ಮಕ ದೃಷ್ಟಿಯಿಂದ ಕಲಬುರಗಿಗೆ ಉಪರಾಜಧಾನಿ ಪಟ್ಟ ಸಿಗಬೇಕೆಂಬ ಕೂಗಿನಲ್ಲಿ ನ್ಯಾಯವಿದೆ. ಈ ಕುರಿತು ಮುಂಬರುವ ಅಧಿವೇಶನದಲ್ಲಿ ಸರ್ಕಾರದ ಗಮನ ಸೆಳೆಯುವೆ ಎಂದರು.
ಕಾರ್ಯಕ್ರಮದ ದಿವ್ಯ ನೇತೃತ್ವ ವಹಿಸಿದ ಶ್ರೀಶೈಲಂ ಸಾರಂಗಮಠದ ಪೂಜ್ಯ ಶ್ರೀ ಡಾ. ಸಾರಂಗಧರ ದೇಶಿಕೇಂದ್ರ ಮಹಾಸ್ವಾಮಿಗಳು ಮಾತನಾಡಿ, ಕಲಬುರಗಿ ಜಿಲ್ಲೆ ಭೌಗೋಳಿಕವಾಗಿ ಆಂಧ್ರಪ್ರದೇಶ ಮತ್ತು ಮಹಾರಾಷ್ಟ್ರದ ಗಡಿಗಳಿಗೆ ಹೊಂದಿಕೊಂಡಿರುವುದರಿಂದ, ಇಲ್ಲಿನ ಭಾಷೆಯಲ್ಲಿ ಆಯಾ ರಾಜ್ಯಗಳ ಪ್ರಭಾವ ಕಾಣುವುದು ಸಹಜ. ಈ ವಿಭಿನ್ನತೆಯ ನಡುವೆಯೂ ನಮ್ಮದು ಗಂಡು ಮೆಟ್ಟಿದ ನಾಡು. ಬೆಂಗಳೂರಿನವರು ನಮ್ಮ ಭಾಷೆಯನ್ನು ನೋಡಿ ನಗಬಹುದು ಆದರೆ ನಮ್ಮ ಭಾಷೆಯ ಗತ್ತು ಮತ್ತು ಚೈತನ್ಯವೇ ಬೇರೆ ಎಂದು ಹೆಮ್ಮೆಯಿಂದ ನುಡಿದರು.
ಹಿಂದೆಲ್ಲ ಕಲಬುರಗಿಯಲ್ಲಿ ಕನ್ನಡ ಕಲಿಕೆ ಎಷ್ಟು ಕಷ್ಟಕರವಾಗಿತ್ತೆಂದರೆ ಉರ್ದು ಬೋರ್ಡ್‌ಗಳನ್ನು ಹಾಕಿ ಒಳಗೆ ಕನ್ನಡ ಕಲಿಸುವಂತಹ ಪರಿಸ್ಥಿತಿ ಇತ್ತು. ಅಂತಹ ಕಠಿಣ ಹಾದಿಯನ್ನು ದಾಟಿ ಇಂದು ಕನ್ನಡ ಸ್ವತಂತ್ರವಾಗಿ ಹೆಮ್ಮರವಾಗಿ ಬೆಳೆದಿರುವುದು ಸಂತಸದ ವಿಷಯ ಎಂದರು.
ಕನ್ನಡ ಸಾಹಿತ್ಯಕ್ಕೆ ನಿಜವಾದ ಮೆರುಗು ನೀಡಿದವರು ಬಸವಾದಿ ಶರಣರು. ದಯವೇ ಧರ್ಮದ ಮೂಲವೆಂದು ಸಾರಿದ ಶರಣರ ವಚನಗಳು ಇಂದಿಗೂ ನಮಗೆ ಸ್ಫೂರ್ತಿ. ವಿಜಯಕುಮಾರ್ ತೇಗಲತಿಪ್ಪಿ ಅವರ ನೇತೃತ್ವದಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಅತ್ಯುತ್ತಮ ಕೆಲಸ ಮಾಡುತ್ತಿದೆ. ಇದು ನಂದಾ ದೀಪದಂತೆ ಪ್ರಜ್ವಲಿಸುತ್ತಿದೆ ಎಂದರು.

ಚಿತ್ತಾಪುರಿನ ನರಸಪ್ಪ ಚಿನ್ನಕಟ್ಟಿ ಅವರು ಸಮ್ಮೇಳನಾಧ್ಯಕ್ಷರ ಬದುಕು-ಬರಹ ಕುರಿತು ವಿಶೇಷ ಉಪನ್ಯಾಸದಲ್ಲಿ ಮಾತನಾಡಿ, ಸಮ್ಮೇಳನಾಧ್ಯಕ್ಷ ಮೂಡಬಿ ಗುಂಡೇರಾವ ಅವರು ತಮ್ಮ ಪ್ರಾಥಮಿಕ ಶಿಕ್ಷಣವನ್ನು ಸ್ವಗ್ರಾಮದಲ್ಲಿ, ಚಿಂಚನಸೂರು ಗ್ರಾಮದಲ್ಲಿ ಪ್ರೌಢಶಾಲೆ ವಿದ್ಯಾಭ್ಯಾಸ ಪೂರೈಸಿದ್ದಾರೆ. ಶರಣಬಸವೇಶ್ವರ ಸಂಸ್ಥೆಯಲ್ಲಿ ಪದವಿ ಪಡೆದ ನಂತರ ಗುಲಬರ್ಗಾ ವಿಶ್ವವಿದ್ಯಾಲಯದಲ್ಲಿ ಎಂ.ಎ. ಮತ್ತು ಎಂ.ಫಿಲ್ ಪದವಿಗಳನ್ನು ಪಡೆದು ಇತಿಹಾಸ ಪ್ರಾಧ್ಯಾಪಕರಾಗಿ ಸೇಡಂ ತಾಲ್ಲೂಕಿನ ನೃಪತುಂಗ ಕಾಲೇಜಿನಲ್ಲಿ ವೃತ್ತಿ ಜೀವನ ಆರಂಭಿಸಿ, ಸಾವಿರಾರು ವಿದ್ಯಾರ್ಥಿಗಳಿಗೆ ಮಾರ್ಗದರ್ಶಕರಾಗಿದ್ದಾರೆ.
ಇಂದಿನ ಡಿಜಿಟಲ್ ಯುಗದ ಸೌಲಭ್ಯಗಳಿಲ್ಲದ ಅಂದಿನ ದಿನಮಾನದಲ್ಲಿ ಚಿಮಣಿ, ದೀಪದ ಬೆಳಕಿನಲ್ಲಿ ಓದಿ ಬೆಳೆದ ಮುಡಬಿ ಗುಂಡೇರಾವ ಇವರು ಇಂದು ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷರಾಗಿರುವುದು ಇಡೀ ಜಿಲ್ಲೆಗೆ ಹೆಮ್ಮೆಯ ವಿಷಯವಾಗಿದೆ. ಸುಮಾರು 15ಕ್ಕೂ ಹೆಚ್ಚು ಸ್ವತಂತ್ರ ಕೃತಿಗಳನ್ನು ರಚಿಸಿದ್ದಾರೆ. 10ಕ್ಕೂ ಹೆಚ್ಚು ಕೃತಿಗಳನ್ನು ಅತ್ಯಂತ ಜವಾಬ್ದಾರಿಯುತವಾಗಿ ಸಂಪಾದಿಸಿದ್ದಾರೆ. ನಾಡಿನ ವಿವಿಧ ಪತ್ರಿಕೆಗಳಲ್ಲಿ ಮತ್ತು ಸ್ಮರಣ ಸಂಚಿಕೆಗಳಲ್ಲಿ ಅವರ 100ಕ್ಕೂ ಹೆಚ್ಚು ಸಂಶೋಧನಾತ್ಮಕ ಲೇಖನಗಳು ಪ್ರಕಟವಾಗಿವೆ. ಜಾನಪದ ಸಾಹಿತ್ಯದಲ್ಲಿ ಅವರು ತೋರಿರುವ ಆಸಕ್ತಿ ಮತ್ತು ಸಂಶೋಧನಾ ದೃಷ್ಟಿಕೋನವು ಶ್ಲಾಘನೀಯವಾಗಿದೆ ಎಂದರು.
ಸೇಡಂ ನಾಡಿನ ಇತಿಹಾಸ ಮತ್ತು ದರ್ಶನ' ಎಂಬ ವಿಷಯದ ಮೇಲೆ ಅವರು ಕೈಗೊಂಡಿರುವ ಸಂಶೋಧನೆಗಳು ಅತ್ಯಂತ ಮೌಲ್ಯಯುತವಾಗಿವೆ. ಸುಮಾರು 10 ವರ್ಷಗಳ ಕಾಲ ಸೇಡಂ ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದಾರೆ. ಸಾಹಿತ್ಯ ಕ್ಷೇತ್ರಕ್ಕೆ ಅವರು ನೀಡಿದ ಅಮೂಲ್ಯ ಕೊಡುಗೆಗಳನ್ನು ಪರಿಗಣಿಸಿ ಇಂದಿಲ್ಲಿ ಸಮ್ಮೇಳನಾಧ್ಯಕ್ಷ ಗೌರವ ನೀಡಲಾಗಿದೆ. ಸರಳ ಸಜ್ಜನಿಕೆಯ ವ್ಯಕ್ತಿಯಾದ ಗುಂಡೇರಾವ್ ಅವರು ಜಿಲ್ಲೆಯ ಸಾಹಿತ್ಯ ಪರಂಪರೆಯನ್ನು ಎತ್ತಿ ಹಿಡಿಯುವಲ್ಲಿ ಶ್ರಮಿಸಿದ್ದಾರೆ ಎಂದರು.
ಈ ಸಂದರ್ಭದಲ್ಲಿ ಸಾಹಿತ್ಯ ಸಮ್ಮೇಳನಾಧ್ಯಕ್ಷ ಮುಡಬಿ ಗುಂಡೇರಾವ, ಗಂಗಾ ಪರಮೇಶ್ವರಿ ಶಿಕ್ಷಣ ಸಂಸ್ಥೆ ಅಧ್ಯಕ್ಷೆ ಅಮರೇಶ್ವರಿ ಬಾಬುರಾವ ಚಿಂಚನಸೂರ, ರಾಜ್ಯ ಗುತ್ತಿಗೆದಾರರ ಸಂಘದ ಗೌರವಾಧ್ಯಕ್ಷ ಜಗನ್ನಾಥ ಶೇಖಜಿ, ಮಂಜುನಾಥ ನಾಲವರಕರ್, ಗೋಪಾಲ ನಾಟಿಕಾರ, ಗುರು ಬಂಡಿ, ಪ್ರಶಾಂತಗೌಡ ಮಾಲಿಪಾಟೀಲ, ಮಹೇಶ ಧರಿ ಉಪಸ್ಥಿತರಿದ್ದರು. ಅಂಬಾರಾಯ ಮಡ್ಡೆ, ವೆಂಕುಬಾಯಿ ರಜಪೂತ ನಿರೂಪಿಸಿದರು. ಮಂಜುನಾಥ ಕಂಬಾಳಿಮಠ ಸ್ವಾಗತಿಸಿದರು. ಶಕುಂತಲಾ ಪಾಟೀಲ ವಂದಿಸಿದರು.

# ಶಾಲಾ ಬಸ್ ಚಕ್ರದಡಿ ಸಿಲುಕಿ ಎಲ್‌ಕೆಜಿ ಬಾಲಕ ದಾರುಣ ಮರಣ



**ಯಾದಗಿರಿ :ಫೆ.18:** ಗುರುಮಠಕಲ್ ತಾಲೂಕಿನ ಗಾಜರಕೋಟ್ ಗ್ರಾಮದಲ್ಲಿ ಮಂಗಳವಾರ ಸಂಭವಿಸಿದ ಭೀಕರ ರಸ್ತೆ ಅಪಘಾತದಲ್ಲಿ ಎಲ್‌ಕೆಜಿ ವಿದ್ಯಾರ್ಥಿಯೊಬ್ಬನು ಶಾಲಾ ಬಸ್ ಚಕ್ರದಡಿ ಸಿಲುಕಿ ಮೃತಪಟ್ಟಿರುವ ದುರ್ಘಟನೆ ನಡೆದಿದೆ.
ಮೃತ ಬಾಲಕ ಪುನೀತ್ (4) ಎಂದು ಗುರುತಿಸಲಾಗಿದೆ. ಗ್ರಾಮದಲ್ಲಿರುವ ಖಾಸಗಿ ಶಾಲೆಯ ಬಸ್ ನಿತ್ಯದಂತೆ ಮಕ್ಕಳನ್ನು ಶಾಲೆಯಿಂದ ಮನೆಗೆ ಬಿಟ್ಟು ಹಿಂತಿರುಗುತ್ತಿದ್ದ ವೇಳೆ ಈ ಅವಘಡ ಸಂಭವಿಸಿದೆ.

ವಿದ್ಯಾರ್ಥಿಗಳನ್ನು ಕೆಳಗಿಳಿಸಿದ ನಂತರ ಚಾಲಕನು ಹಿಂಭಾಗ ಗಮನಿಸದೇ ಬಸ್ ಅನ್ನು ರಿವರ್ಸ್ ತೆಗೆದುಕೊಂಡಿದ್ದಾನೆ ಎನ್ನಲಾಗಿದೆ. ಈ ಸಂದರ್ಭದಲ್ಲಿ ಹಿಂಭಾಗಕ್ಕೆ ಬಂದಿದ್ದ ಬಾಲಕ ಚಾಲಕರ ಗಮನಕ್ಕೆ ಬಾರದೆ ಬಸ್ ಹಿಂಬದಿ ಚಕ್ರದಡಿ ಸಿಲುಕಿದ್ದಾನೆ. ಪರಿಣಾಮವಾಗಿ ಗಂಭೀರವಾಗಿ ಗಾಯಗೊಂಡ ಬಾಲಕ ಸ್ಥಳದಲ್ಲೇ ಪ್ರಾಣ ಕಳೆದುಕೊಂಡಿದ್ದಾನೆ ಎಂದು ಪ್ರಾಥಮಿಕ ಮಾಹಿತಿ ತಿಳಿಸಿದೆ.

ಘಟನೆ ಗ್ರಾಮ ಪಂಚಾಯಿತಿ ಕಚೇರಿ ಸಮೀಪದಲ್ಲಿ ನಡೆದಿದ್ದು, ಸ್ಥಳದಲ್ಲಿ ದುಃಖದ ವಾತಾವರಣ ನಿರ್ಮಾಣವಾಗಿದೆ. ಬಾಲಕನ ಪೋಷಕರ ಆಕ್ರಂದನ ಮನಕಲುಕುವಂತಿತ್ತು.ಘಟನೆಯ ವೇಳೆ ಬಸ್ ಚಾಲಕರಾಗಿ ಅನಿಲ್ ರೆಡ್ಡಿ ಕರ್ತವ್ಯ ನಿರ್ವಹಿಸುತ್ತಿದ್ದರೆಂದು ತಿಳಿದುಬಂದಿದೆ. ಶಾಲಾ ಮಕ್ಕಳ ಸುರಕ್ಷತೆ ವಿಚಾರದಲ್ಲಿ ನಿರ್ಲಕ್ಷ್ಯ ನಡೆದಿದೆಯೇ ಎಂಬ ಪ್ರಶ್ನೆ ಸಾರ್ವಜನಿಕ ವಲಯದಲ್ಲಿ ಉದ್ಭವಿಸಿದೆ. ಘಟನಾ ಮಾಹಿತಿ ತಿಳಿಯುತ್ತಿದ್ದಂತೆಯೇ ಗುರುಮಠಕಲ್ ಪೊಲೀಸ್ ಠಾಣೆಯ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿ ಪ್ರಕರಣ ದಾಖಲಿಸಿಕೊಂಡಿದ್ದಾರೆ. ಮುಂದಿನ ತನಿಖೆ ಮುಂದುವರೆದಿದೆ.
ಈ ದುರ್ಘಟನೆಗೆ ಸಂಬಂಧಿಸಿದಂತೆ ಸಮಗ್ರ ತನಿಖೆ ನಡೆಸಿ, ನಿರ್ಲಕ್ಷ್ಯಕ್ಕೆ ಕಾರಣರಾದವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು ಎಂದು ಗ್ರಾಮಸ್ಥರು ಆಗ್ರಹಿಸಿದ್ದಾರೆ.

# ಪಿಡಿಓ ವಿರುದ್ಧ ಕ್ರಿಮಿನಲ್ ಪ್ರಕರಣಕ್ಕೆ ಆಗ್ರಹ




**ಯಾದಗಿರಿ:ಫೆ.18:** ತಾಲೂಕಿನ ಮುದ್ನಾಳ ಗ್ರಾಮ ಪಂಚಾಯಿತಿಯಲ್ಲಿ ಕಾರ್ಯನಿರ್ವಹಿಸಿದ್ದ ಪಿಡಿಓ ನೀಲಕಂಠ ಅವರು ವಿವಿಧ ಅಭಿವೃದ್ಧಿ ಕಾಮಗಾರಿಗಳು ಹಾಗೂ ಯೋಜನೆಗಳಡಿ ಸರ್ಕಾರದ ಹಣ ದುರುಪಯೋಗ ಮಾಡಿಕೊಂಡಿರುವ ಗಂಭೀರ ಆರೋಪ ಕೇಳಿಬಂದಿದ್ದು, ಅವರ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸಿ ಅಮಾನತ್ತುಗೊಳಿಸಿ ಸಮಗ್ರ ತನಿಖೆ ನಡೆಸಬೇಕು ಎಂದು ಸಾಮಾಜಿಕ ಹೋರಾಟಗಾರ ಉಮೇಶ್ ಮುದ್ನಾಳ್ ಆಗ್ರಹಿಸಿದರು.
ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಪಿಡಿಓ ನೀಲಕಂಠ ಅವರ ಅವಧಿಯಲ್ಲಿ 15ನೇ ಹಣಕಾಸು ಆಯೋಗ ಯೋಜನೆ, ತೆರಿಗೆ ಸಂಗ್ರಹಣೆ ಹಾಗೂ ಮನರೇಗಾ ಯೋಜನೆಯಡಿ ಖರ್ಚಾದ ಅನುದಾನದ ಬಗ್ಗೆ ಕೂಲಂಕೂಷ ತನಿಖೆ ನಡೆಸಬೇಕಿದೆ ಎಂದು ಒತ್ತಾಯಿಸಿದರು.
ಗೋದಾಮು ಕಾಮಗಾರಿಯಲ್ಲಿ ಅಕ್ರಮ ಪಾವತಿ ಆರೋಪ 2021-22ನೇ ಸಾಲಿನಲ್ಲಿ ಆರಂಭಗೊಂಡ ಗೋದಾಮು ನಿರ್ಮಾಣ ಕಾಮಗಾರಿಯನ್ನು ಅಂದಾಜು ಪ್ರಕಾರ ಪೂರ್ಣಗೊಳಿಸದೇ ಇದ್ದರೂ 03-10-2023ರಂದು ಒಂದೇ ದಿನದಲ್ಲಿ ರೂ.18,64,000 ಮುಂಗಡ ಪಾವತಿ ಮಾಡಲಾಗಿದೆ ಎಂದು ಅವರು ಆರೋಪಿಸಿದರು.

ನಕಲಿ ದಾಖಲೆ ಸೃಷ್ಟಿಸಿ ಅನುದಾನ ದುರುಪಯೋಗ-ಠಾಣಗುಂದಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ತಳಕ ಗ್ರಾಮದ ಬಸವನಕಟ್ಟೆ ಪ್ರದೇಶದಲ್ಲಿ ದನ-ಕರುಗಳಿಗೆ ಕುಡಿಯುವ ನೀರಿನ ತೊಟ್ಟಿ ಹಾಗೂ ಬಸವನ ದೇವಸ್ಥಾನದಿಂದ ಹಳ್ಳದವರೆಗೆ ಸಿಸಿ ಚರಂಡಿ ನಿರ್ಮಾಣ ಕಾಮಗಾರಿ ಕೈಗೊಳ್ಳದೇ ನಕಲಿ ದಾಖಲೆ ಸೃಷ್ಟಿಸಿ ಸುಮಾರು ರೂ.1.60 ಲಕ್ಷ ಹಣ ದುರುಪಯೋಗ ಮಾಡಿಕೊಂಡಿದ್ದಾರೆ ಎಂದು ದೂರಿದರು.

ಸರ್ಕಾರಿ ಜಾಗ ಅಕ್ರಮ ಸೇರ್ಪಡೆ ಆರೋಪ-ಮುದ್ನಾಳ ಗ್ರಾಮದ ಮಾಜಿ ಗ್ರಾಮ ಪಂಚಾಯಿತಿ ಉಪಾಧ್ಯಕ್ಷ ಸುಭಾಷರಡ್ಡಿ ಕುಟುಂಬದ ಹೆಸರಿನಲ್ಲಿ ಸರ್ಕಾರಿ ಜಾಗವನ್ನು ಅಕ್ರಮವಾಗಿ ಸೇರ್ಪಡೆ ಮಾಡಲಾಗಿದೆ. ಮೃತಪಟ್ಟವರ ಹೆಸರಿನಲ್ಲಿ ದಾಖಲೆ ಸೇರಿಸಿ ಆಸ್ತಿ ವರ್ಗಾವಣೆ ಮಾಡಿರುವುದು ಕಾನೂನುಬಾಹಿರವಾಗಿದೆ. ಮೂಲ ದಾಖಲೆಗಳ ಪರಿಶೀಲನೆಯಿಲ್ಲದೇ ಮನೆ ನಿರ್ಮಾಣಕ್ಕೆ ಅವಕಾಶ ನೀಡಲಾಗಿದೆ ಎಂದು ಅವರು ಪ್ರಶ್ನಿಸಿದರು. ಬಡವರಿಗೆ 20ಥ30 ಅಳತೆಯ ನಿವೇಶನ ನೀಡಬೇಕಾದ ಸರ್ಕಾರದ ನಿಯಮವಿದ್ದರೂ, 60ಥ80 ಅಳತೆಯಲ್ಲಿ ಅಕ್ರಮ ಮನೆ ನಿರ್ಮಾಣಕ್ಕೆ ಅವಕಾಶ ನೀಡಿರುವುದು ಗಂಭೀರ ಉಲ್ಲಂಘನೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಅಧಿಕಾರಿಗಳ ಶಾಮೀಲಾಗಿರುವ ಆರೋಪ-ಸರ್ಕಾರಿ ಜಾಗ ರಕ್ಷಿಸಬೇಕಾದ ಅಧಿಕಾರಿಗಳೇ ಜಾಗ ಕಬಳಿಕೆಗೆ ಸಹಕರಿಸಿದ್ದಾರೆ. ಸಂಬಂಧಿತ ಸಿಬ್ಬಂದಿ ಹಾಗೂ ಅಧಿಕಾರಿಗಳ ವಿರುದ್ಧವೂ ಶಿಸ್ತು ಕ್ರಮ ಜರುಗಿಸಬೇಕು ಎಂದು ಆಗ್ರಹಿಸಿದರು.
ತಾಲೂಕು ಮತ್ತು ಜಿಲ್ಲಾ ಪಂಚಾಯಿತಿ ಕಚೇರಿಗಳಲ್ಲಿ ಐದು ವರ್ಷಕ್ಕಿಂತ ಹೆಚ್ಚು ಅವಧಿ ಕಾರ್ಯನಿರ್ವಹಿಸುತ್ತಿರುವ ಕೆಲ ಸಿಬ್ಬಂದಿ ಅಕ್ರಮಗಳಿಗೆ ಬೆಂಬಲವಾಗಿ ಕೆಲಸ ಮಾಡುತ್ತಿದ್ದಾರೆ. ಸಾರ್ವಜನಿಕರ ತೆರಿಗೆ ಹಣ ದುರುಪಯೋಗವಾಗುತ್ತಿದ್ದು, ಅಭಿವೃದ್ಧಿ ಕಾಮಗಾರಿಗಳು ಹಿನ್ನಡೆಯಾಗಿವೆ ಎಂದು ದೂರಿದರು.

ಪ್ರತಿಭಟನೆ ಎಚ್ಚರಿಕೆ-ಇಂತಹ ಅಧಿಕಾರಿಗಳನ್ನು ಕಲ್ಯಾಣ ಕರ್ನಾಟಕ ಭಾಗದಿಂದ ಬೇರೆ ಜಿಲ್ಲೆಗಳಿಗೆ ವರ್ಗಾವಣೆ ಮಾಡಬೇಕು. ಇಲ್ಲವಾದರೆ ಒಂದು ವಾರದೊಳಗೆ ಜಿಲ್ಲಾ ಪಂಚಾಯಿತಿ ಕಚೇರಿ ಎದುರು ಮುಳ್ಳು ಬೇಲಿ ಹಾಕಿ ಪ್ರತಿಭಟನೆ ನಡೆಸಲಾಗುವುದು ಎಂದು ಎಚ್ಚರಿಕೆ ನೀಡಿದರು.
ಈ ಕುರಿತು ಜಿಲ್ಲಾಧಿಕಾರಿ ಮೂಲಕ ಮುಖ್ಯಮಂತ್ರಿ ಹಾಗೂ ಸಂಬಂಧಿತ ಸಚಿವರಿಗೆ ಮನವಿ ಸಲ್ಲಿಸಲಾಗಿದೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಸಿದ್ದರಾಮ, ಭೀಮರಾಯ್, ಪುಲಪ್ಪ, ಶರಣಪ್ಪ, ರಾಜು, ಮಲ್ಲಪ್ಪ, ಮೋಹನ, ಪವನ್, ಮಲ್ಲು, ಜಿತೇಂದ್ರ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

# ಬಳ್ಳಾರಿಯ ಉದಯ ಕಿರಣ್ ನ್ಯಾಯಾಧೀಶರ ಪರೀಕ್ಷೆಯಲ್ಲಿ ಆಯ್ಕೆ



**ಬಳ್ಳಾರಿ, ಫೆ.18:** ನಗರದ ಉದಯ ಕಿರಣ್ ಡಿ. ಇತ್ತೀಚೆಗೆ ಸಿವಿಲ್ ನ್ಯಾಯಾಧೀಶರ ಹುದ್ದೆಗೆ ನಡೆದ ಪರೀಕ್ಷೆಯಲ್ಲಿ ಆಯ್ಕೆಯಾಗಿದ್ದಾರೆ.


ಇವರು ಆಶಾಕಿರಣ ಪತ್ರಿಕೆಯ ಸಂಪಾದಕರಾಗಿದ್ದ ದಿವಂಗತ ಡಿ. ಯರ್ರಿಸ್ವಾಮಿ ಅವರ ನಾಲ್ಕನೇ ಪುತ್ರರಾಗಿದ್ದಾರೆ.
ಬಳ್ಳಾರಿಯಲ್ಲಿಯೇ ಹುಟ್ಟಿ ಬೆಳೆದ ಇವರು ನಗರದ ಬಿಐಟಿಎಂ ಕಾಲೇಜಿನಲ್ಲಿ ಇಂಜಿನೀಯರಿಂಗ್ ಮುಗಿಸಿ, ನಂತರ ವೀರಶೈವ ವಿದ್ಯಾವರ್ಧಕ ಸಂಘದ ವುಂಕಿ ಸಣ್ಣರುದ್ರಪ್ಪ ಲಾ ಕಾಲೇಜಿನಲ್ಲಿ ಎಲ್ ಎಲ್ ಬಿ ಪದವಿಯನ್ನು 2023 ರಲ್ಲಿ ಮುಗಿಸಿ ಖಾಸಗಿಯಾಗಿ ವಕೀಲ ವೃತ್ತಿ ಆರಂಭಿಸಿದ್ದರು.

ಒಟ್ಟಾರೆ 15 ಸಾವಿರ ಜನರು ಪ್ರಿಲಿಮಿನರಿ ಪರೀಕ್ಷೆ ಎದುರಿಸಿದ್ದರು ಅದರಲ್ಲಿ 900 ಜನ ಮೇನ್ಸ್ ಪರೀಕ್ಷೆಗೆ ಆಯ್ಕೆಯಾಗಿದ್ದರು. ಅವರಲ್ಲಿ 252 ಜನ ಈ ಪರೀಕ್ಷೆ ಎದುರಿಸಿದ್ದರು.
ಅಂತಿಮವಾಗಿ 83 ಜನ ಆಯ್ಕೆಯಾಗಿದ್ದು ಅವರಲ್ಲಿ ಇವರು ಒಬ್ಬರಾಗಿದ್ದಾರೆ.
ಇವರ ಹಿರಿಯ ಸಹೋದರ ಡಿ.ಕ್ರಾಂತಿ ಕಿರಣ ಅವರು ಈಗಾಗಲೇ ನ್ಯಾಯಾಧೀಶರಾಗಿ ದೊಡ್ಡಬಳ್ಳಾಪುರದಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. ಇದರಿಂದಾಗಿ ಒಂದೇ ಮನೆಯಲ್ಲಿ ಇಬ್ಬರು ನ್ಯಾಯಾಧೀಶರಾಗುವ ಮೂಲಕ ಗಮನ ಸೆಳೆದಿದ್ದಾರೆ.

ಇವರ ಆಯ್ಕೆಗೆ ವೀರಶೈವ ವಿದ್ಯಾವರ್ಧಕ ಸಂಘದ ವುಂಕಿ ಸಣ್ಣ ರುದ್ರಪ್ಪ ಲಾ ಕಾಲೇಜಿನ ಆಡಳಿತ ಮಂಡಳಿಯ ಅಧ್ಯಕ್ಷ ಮಿಂಚೇರಿ ನರೇಂದ್ರಬಾಬು ಮತ್ತು ಸಿಬ್ಬಂದಿ ಹರ್ಷ ವ್ಯಕ್ತಪಡಿಸಿದ್ದಾರೆ.

# ಬಾವಿಯಲ್ಲಿ ಬಿದ್ದು ವಿದ್ಯಾರ್ಥಿ ಸಾವು

**ಕಲಬುರಗಿ,ಫೆ.18–**ತಾಲ್ಲೂಕಿನ ಬಬಲಾದ (ಎಸ್) ಗ್ರಾಮದ ಖಾಸಗಿ ಶಾಲೆಯಲ್ಲಿ ಓದುತ್ತಿದ್ದ ವಿದ್ಯಾರ್ಥಿಯೊಬ್ಬ ಶಾಲೆ ಆವರಣದಲ್ಲಿರುವ ಬಾವಿಯಲ್ಲಿ ಬಿದ್ದು ಮೃತಪಟ್ಟಿದ್ದಾನೆ.
ಗುರು ಮೃತಪಟ್ಟ ವಿದ್ಯಾರ್ಥಿ.
ವಿದ್ಯಾರ್ಥಿ ಸಾವಿಗೆ ನಿಖರ ಕಾರಣ ತಿಳಿದುಬಂದಿಲ್ಲ. ಯಾವುದೋ ಕಾರಣಕ್ಕೆ ಮನಸ್ಸಿನ ಮೇಲೆ ಬೇಜಾರು ಮಾಡಿಕೊಂಡು ಬಾವಿಯಲ್ಲಿ ಬಿದ್ದು ಮೃತಪಟ್ಟಿದ್ದಾನೆ ಎಂದು ಬಾಲಕನ ಸಹೋದರಿ ಸುರೇಖಾ ರವಿಚಂದ್ರ ಹಡಪದ ಅವರು ಸಬ್-ಅರ್ಬನ್ ಪೊಲೀಸ್ ಠಾಣೆಯಲ್ಲಿ ಸಲ್ಲಿಸಿರುವ ದೂರಿನಲ್ಲಿ




ತಿಳಿಸಿದ್ದಾರೆ. ಸಬ್-ಅರ್ಬನ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

Owned, and published by SYED AHAMAD HUSSAINI MATWALE from Ward No,21 S S Matwale Hussaini Saheb Dargha, Jummal Doddi, Po-Manvi,Raichur, Karnataka -584123.
Printed at Hulkoti, New Court, Opposite Plot No, 28, RS No 312/3B, Garag Complex, Gadag, Karnataka-582101 Editor: SYED AHAMAD HUSSAINI MATWALE